₹4 । ಸಂಪುಟ 4 । ಸಂಚಿಕೆ 46 । ಪುಟ 4 । RNI: KARKAN/2020/79084

ಪ್ರಧಾನ ಸಂಪಾದಕರು : ಸತೀಶ್. ಬಿ. ಜಿ

ಬೆಳಗಾವಿ ಮತ್ತು ಬೆಂಗಳೂರಿನಿಂದ ಏಕ ಕಾಲದಲ್ಲಿ ಪ್ರಕಟಿತ

# ಬೆಳಗಾವಿ ವರದಿ

ಕನ್ನಡ ದಿನಪತ್ರಿಕೆ

9900332089 | newsbelagavi@gmail.com | Regn.No: G-2/PMG/KA/NK/BM/139/2021-23 | Sunday, 02 APRIL 2023 | BELAGAVI VARADI KANNADA DAILY

## ಕೋಲಾರದಲ್ಲಿ ಸ್ಪರ್ಧೆಗೆ ಮಾನಸಿಕವಾಗಿ ಸಿದ್ಧ: ಮಾಜಿ ಸಿಎಂ ಸಿದ್ದರಾಮಯ್ಯ



ಕೋಲಾರ: 'ಕೋಲಾರ ಕ್ಷೇತ್ರದಲ್ಲಿ ಸ್ಪರ್ಧೆಗೆ ನಾನು ಮಾನಸಿಕವಾಗಿ ಸಿದ್ಧವಾಗಿದ್ದೇನೆ. ಆದರೆ, ಹೈಕಮಾಂಡ್ ತೀರ್ಮಾನಕ್ಕೆ ಬದ್ಧನಾಗಿರುತ್ತೇನೆ' ಎಂದು ಸಿದ್ದರಾಮಯ್ಯ ಪುನರುಚ್ಚರಿಸಿದರು. ಶನಿವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, 'ಏ.4ರಂದು ಅಭ್ಯರ್ಥಿಗಳ ಎರಡನೇ ಪಟ್ಟಿ ಬಿಡುಗಡೆಯಾಗುವ ನಿರೀಕ್ಷೆ ಇದೆ.

ವರುಣಾದಲ್ಲೂ ಸ್ಪರ್ಧೆ ಮಾಡುತ್ತೇನೆ. ಇದು ನನ್ನ ಕೊನೆಯ ಚುನಾವಣೆಯಾಗಿದ್ದು, ನನ್ನ ತವರೂರಾಗಿರುವ ಕಾರಣ ಅಲ್ಲಿ ಕಣಕ್ಕಿಳಿಯುತ್ತಿದ್ದೇನೆ. ಅಲ್ಲಿಯೇ ನನ್ನ ರಾಜಕೀಯ ಪ್ರಾರಂಭವಾಗಿತ್ತು' ಎಂದರು.

## ಬೆಂಗಳೂರಿಗರ ಪರಿಸರ ಪ್ರೀತಿಗೆ ಕನ್ನಡದಲ್ಲೇ ಮೆಚ್ಚುಗೆ ಸೂಚಿಸಿದ ಪ್ರಧಾನಿ



ಬೆಂಗಳೂರು: ರಾಜ್ಯ ವಿಧಾನಸಭೆ ಚುನಾವಣೆ ಸಮೀಪಿಸುತ್ತಿದ್ದಂತೆಯೇ ಬೆಂಗಳೂರು ಹಾಗೂ ಕರ್ನಾಟಕದ ವಿಚಾರಗಳ ಬಗ್ಗೆ ತಮ್ಮ ಭಾಷಣಗಳಲ್ಲಿ ಉಲ್ಲೇಖಿಸುವುದು, ಟ್ವೀಟ್ ಮಾಡುವುದನ್ನು ಪ್ರಧಾನಿ ನರೇಂದ್ರ ಮೋದಿ ಅನುಸರಿಸುತ್ತಲೇ ಇದ್ದಾರೆ.

ರಾಜ್ಯದ ಜನರ ಹೃದಯ ಗೆಲ್ಲುವ ನಿಟ್ಟಿನಲ್ಲಿ ಸದಾ ಒಂದಿಲ್ಲೊಂದು ತಂತ್ರಗಾರಿಕೆ ಅನುಸರಿಸುತ್ತಿರುವ ಪ್ರಧಾನಿ ಇದೀಗ ಬೆಂಗಳೂರಿಗರ ಪರಿಸರ ಪ್ರೀತಿಯ ಕುರಿತಾದ ಒಂದು ಟ್ವೀಟ್ಗೆ ಕನ್ನಡದಲ್ಲೇ ಪ್ರತಿಕ್ರಿಯಿಸಿ ಶಹಬ್ಬಾಸ್ಗಿರಿ ನೀಡಿದ್ದಾರೆ. ಬೆಂಗಳೂರು ನಗರವು ಪ್ರಕೃತಿಯೊಂದಿಗೆ ಗಾಢವಾದ ಬಾಂಧವ್ಯವನ್ನು ಹೊಂದಿದೆ ಎಂದು ಅವರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಜತೆಗೆ ನಗರಗಳ ಕುರಿತಾದ ಇಂಥ ಅಂಶಗಳನ್ನು ಹೆಚ್ಚು ಪ್ರಚುರಪಡಿಸಬೇಕಾದ ಅಗತ್ಯವಿದೆ ಎಂದೂ ಪ್ರತಿಪಾದಿಸಿದ್ದಾರೆ. ಬೆಂಗಳೂರಿನಲ್ಲಿ ವರ್ಷಪೂರ್ತಿ ಅರಳುವ ವೈವಿಧ್ಯಮಯ ಮರಗಳ ಸಂಗ್ರಹವಿದೆ ಎಂದು ನಿಮಗೆ ತಿಳಿದಿದೆಯೇ? ಯುಗಗಳ ಹಿಂದೆ ನಗರವನ್ನು ಯೋಜಿಸಿದಾಗ, ಒಂದು ಮರವು ಅರಳುವುದನ್ನು ನಿಲ್ಲಿಸುವ ಸಂದರ್ಭದಲ್ಲಿ, ಇನ್ನೊಂದು ಮರವು ಅದರ ಸ್ಥಾನವನ್ನು ತುಂಬುವ ರೀತಿಯಲ್ಲಿ ಮರಗಳು ಇರುವಂತೆ ಗಿಡಗಳನ್ನು ನೆಟ್ಟು ಬೆಳೆಸಲಾಗಿತ್ತು. ಪರಿಣಾಮವಾಗಿ ಬೆಂಗಳೂರಿನ ಋತುಗಳು ಹೂವಿನ ಸ್ವರಮೇಳವಾಗಿ ಹೊರಹೊಮ್ಮಿದೆ' ಎಂದು ಪರಿಸರಪ್ರಿಯೆ, ಕಲಾವಿದೆ, ಪರಿಸರ ಕುರಿತ ವಿಚಾರಗಳ ಅಂಕಣಕಾರ್ತಿಯೂ ಆಗಿರುವ ಸುಭಾಷಿಣಿ ಚಂದ್ರಮಣಿ ಎಂಬವರು ಟ್ವೀಟ್ ಮಾಡಿದ್ದರು. ಜತೆಗೆ, ಬೆಂಗಳೂರಿನ ಪ್ರಾಕೃತಿಕ ವೈವಿಧ್ಯಕ್ಕೆ ಸಂಬಂಧಿಸಿ ಸರಣಿ ಟ್ವೀಟ್ಗಳನ್ನು ಮಾಡಿದ್ದ ಸುಭಾಷಿಣಿ ಚಂದ್ರಮಣಿ, ಅನೇಕ ವಿಚಾರಗಳನ್ನು ಪ್ರಸ್ತಾಪಿಸಿದ್ದರು. ಬೆಂಗಳೂರಿನಲ್ಲಿ ಮಳೆಗಾಲದ ತಿಂಗಳುಗಳಲ್ಲಿಯೂ ಸಹ, ಹೂವುಗಳಿಂದ ಅಲಂಕರಿಸಲ್ಪಡುವ ಮರಗಳಿವೆ. ಕಾಲೋಚಿತವಾಗಿ ಹೂಡ ಬಿಡುವ ಮರಗಳ ಹೊರತಾಗಿ, ವರ್ಷಪೂರ್ತಿ ಹೋ ಅರಳಿರುವ ದೀರ್ಘಾವಧಿಯ ಮರಗಳಿವೆ. ಇವುಗಳು ಹೂಬಿಡುವ ಋತುವಿನಲ್ಲಿ ಸಣ್ಣ ಅಂತರವನ್ನು ತುಂಬುತ್ತವೆ. ಬೆಂಗಳೂರಿನ ಗಾಳಿಯು ಯಾವಾಗಲೂ ಪರಿಮಳಯುಕ್ತವಾಗಿರುತ್ತದೆ, ಆದ್ದರಿಂದ ಅದರ ಹೆಸರು 'ದಿ ಗಾರ್ಡನ್ ಸಿಟಿ' ಎಂದು ಅವರು ಮತ್ತೊಂದು ಟ್ವೀಟ್ನಲ್ಲಿ ಉಲ್ಲೇಖಿಸಿದರು.

## ಚುನಾವಣೆಯಲ್ಲಿ ಸ್ಪರ್ಧಿಸಲ್ಲ ಎಂದ ಯತೀಂದ್ರ ಸಿದ್ದರಾಮಯ್ಯ; ಅಖಾಡದಿಂದಲೇ ಹಿಂದೆ ಸರಿದ ಶಾಸಕ



ಮಂಡ್ಯ: ಈ ಬಾರಿ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧೆ ಮಾಡುವುದಿಲ್ಲ ಎಂದು ಹೇಳುವ ಮೂಲಕ ವರುಣಾ ಹಾಲಿ ಶಾಸಕ ಯತೀಂದ್ರ ಸಿದ್ದರಾಮಯ್ಯ ಅಚ್ಚರಿ ಮೂಡಿಸಿದ್ದಾರೆ. ಮಂಡ್ಯದಲ್ಲಿ ಸುದ್ದಿಗರರೊಂದಿಗೆ ಮಾತನಾಡಿದ ಯತೀಂದ್ರ ಸಿದ್ದರಾಮಯ್ಯ, ವರುನಾ ಅಥವಾ ಬೇರೆ ಯಾವುದೇ ಕ್ಷೇತ್ರಗಳಿಂದಲೂ ನಾನು ಚುನಾವಣೆಯಲ್ಲಿ ಸ್ಪರ್ಧಿಸಲ್ಲ. ತಂದೆಯವರ ಪರವಾಗಿ ನಾನು ಕಳೆದ ಜನವರಿಯಿಂದಲೇ ಪ್ರಚಾರ ಶುರುಮಾಡಿದ್ದೇನೆ. ವರುಣಾ ಕ್ಷೇತ್ರ ಯಾವ ಒಬ್ಬ ವ್ಯಕ್ತಿಗೆ ಸೇರೊದ್ದಲ್ಲ. ಅದು ಆ ಕ್ಷೇತ್ರದ ಮತದಾರರಿಗೆ ಸೇರಿದ್ದು ಎಂದಿದ್ದಾರೆ.

ತಂದೆಯವರ ಕೊನೇ ಚುನವಣೆ ಹಾಗಾಗಿ ಅವರು ವರುಣಾದಲ್ಲಿ ನಿಲ್ಲಬೇಕು ಎಂಬುದು ಜನರ ಆಶಯ ಎಂದರು. ಈ ಮೂಲಕ ಯತೀಂದ್ರ ಸಿದ್ದರಾಮಯ್ಯ ಚುನಾವಣಾ ಅಖಾಡದಿಂದಲೇ ಹಿಂದೆ ಸರಿಯುವುದಾಗಿ ಸ್ಪಷ್ಟಪಡಿಸಿದ್ದಾರೆ.

## ಕೋಲ್ಕೊತ್ತಾದಲ್ಲಿ ವಿಶ್ವದ ಮೊದಲ ಶಿಲೀಂಧ್ರ ರೋಗ ಪ್ರಕರಣ ಪತ್ತೆ



ಕೋಲ್ಕೊತ್ತಾ: ಮಾರಣಾಂತಿಕ ಸಸ್ಯ ಶಿಲೀಂಧ್ರ ರೋಗ ಇದೀಗ ಭಾರತದಲ್ಲೇ ಪತ್ತೆಯಾಗಿದ್ದು ಕೋಲ್ಕೊತ್ತಾದ 61 ವರ್ಷದ ವ್ಯಕ್ತಿಯೊಬ್ಬರು ಈ ರೋಗಕ್ಕೆ ತುತ್ತಾದ ವಿಶ್ವದ ಮೊದಲ ವ್ಯಕ್ತಿಯಾಗಿ ದಾಖಲಾಗಿದ್ದಾರೆ.

ಸಸ್ಯ ಮೈಕಾಲಜಿಸ್ಟ್ ಆಗಿ ಕೆಲಸ ಮಾಡುತ್ತಿದ್ದ ಸೋಂಕಿತ ವ್ಯಕ್ತಿ ತಮ್ಮ ಸಂಶೋಧನಾ ಚಟುವಟಿಕೆಗಳ ಭಾಗವಾಗಿ ದೀರ್ಘಕಾಲದವರೆಗೆ ಕೊಳೆಯುತ್ತಿರುವ ವಸ್ತುಗಳು, ಅಣಬೆಗಳು ಮತ್ತು ವಿವಿಧ ಸಸ್ಯ ಶಿಲೀಂಧ್ರಗಳೊಂದಿಗೆ ಕೆಲಸ ಮಾಡುತ್ತಿದ್ದುದರಿಂದ ಈ ಕಾಯಿಲೆಗೆ ತುತ್ತಾಗಿದ್ದಾಗಿ ಆರೋಗ್ಯ ತಜ್ಞರು ತಿಳಿಸಿದ್ದಾರೆ.

ಗಡಸು ಧ್ವನಿ, ಕೆಮ್ಮು, ತೀವ್ರ ಆಯಾಸ ಮತ್ತು ಆಹಾರ ನುಂಗಲು ಕಷ್ಟವಾದ ನಂತರ ಆಸ್ಪತ್ರೆಗೆ ಭೇಟಿ ನೀಡಿದ್ದರು. ವೈದ್ಯರು ಮೊದಲಿಗೆ ಇದನ್ನು ಪತ್ತೆ ಮಾಡುವಲ್ಲಿ ಕಷ್ಟಪಟ್ಟರು. ಕಾರಣ ಈ ವ್ಯಕ್ತಿ ಮಧುಮೇಹ, ಎಚ್ಐವಿ ಸೋಂಕು, ಮೂತ್ರಪಿಂಡ ಅಥವಾ ಯಾವುದೇ ದೀರ್ಘಕಾಲದ ಕಾಯಿಲೆ, ಇಮ್ಯುನೊಸಪ್ರೆಸಿವ್ ಡ್ರಗ್ ಸೇವನೆ ಅಥವಾ ಆಘಾತದ ಇತಿಹಾಸವನ್ನು ಹೊಂದಿರಲಿಲ್ಲ.

ಕೊನೆಗೆ ಸ್ಕ್ಯಾನ್ ಮಾಡಿದಾಗ ಕುತ್ತಿಗೆಯಲ್ಲಿ ಪ್ಯಾರಾಟ್ರಾಶಿಯಲ್ ಬಾವು ಕಂಡುಬಂದಿತ್ತು. ಇದೇ ವೇಳೆ ಕೀವು ಮಾದರಿಗಳ ಪರೀಕ್ಷೆಯಲ್ಲಿ ಕೊಂಡ್ರೊಸ್ಟೆರಿಯಮ್ ಪರ್ಪ್ಯೂರಿಯಮ್‌ನಿಂದ ಸೋಂಕು ತಗುಲಿರುವುದು ಬಹಿರಂಗವಾಗಿದೆ.

ವ್ಯಕ್ತಿಯ ಮಾದರಿಗಳನ್ನು ಸಂಶೋಧನೆಗಾಗಿ WHO ಸಹಯೋಗ ಕೇಂದ್ರಕ್ಕೆ ಕಳುಹಿಸಿದಾಗ ಅಲ್ಲಿ ಅದನ್ನು 'ಕೊಂಡ್ರೊಸ್ಟೆರಿಯಮ್ ಪರ್ಪ್ಯೂರಿಯಮ್' ಎಂದು ಪತ್ತೆ ಮಾಡಲಾಗಿದೆ.

## ಡಿಕೆಶಿ ವಿರುದ್ಧದ ಸಿಬಿಐ ವಿಚಾರಣೆಗೆ ನೀಡಿದ್ದ ತಡೆಯಾಜ್ಞೆ ವಿಸ್ತರಿಸಿದ ಹೈಕೋರ್ಟ್



ಬೆಂಗಳೂರು: ಅಕ್ರಮ ಆಸ್ತಿ ಗಳಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ವಿರುದ್ಧದ ಸಿಬಿಐ ವಿಚಾರಣೆಗೆ ನೀಡಿದ್ದ ತಡೆಯಾಜ್ಞೆಯನ್ನು ಕರ್ನಾಟಕ ಹೈಕೋರ್ಟ್ ಏಪ್ರಿಲ್ 6 ರವರೆಗೆ ವಿಸ್ತರಿಸಿದೆ.

ತಮ್ಮ ವಿರುದ್ಧದ ವಿಚಾರಣೆಯನ್ನು ರದ್ದುಗೊಳಿಸುವಂತೆ ಕೋರಿ ಕಾಂಗ್ರೆಸ್ ಮುಖಂಡ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೆ.ನಟರಾಜನ್ ಅವರಿದ್ದ ಏಕಸದಸ್ಯ ಪೀಠ, ಮಧ್ಯಂತರ ತಡೆಯಾಜ್ಞೆಯನ್ನು ವಿಸ್ತರಿಸಿದೆ.

ಶಿವಕುಮಾರ್ ಅವರು ತಮ್ಮ ವಿರುದ್ಧ ಕಾನೂನು ಕ್ರಮ ಜರುಗಿಸಲು ನೀಡಿರುವ ಅನುಮತಿಯನ್ನು ಪ್ರಶ್ನಿಸಿ ಸಲ್ಲಿಸಿರುವ ಇನ್ನೊಂದು ಅರ್ಜಿಗೆ ಆಕ್ಷೇಪಣೆ ಸಲ್ಲಿಸಲು ರಾಜ್ಯ ಸರ್ಕಾರಕ್ಕೆ ಏಪ್ರಿಲ್ 6ರವರೆಗೆ ಕಾಲಾವಕಾಶ ನೀಡಿ, ವಿಚಾರಣೆಯನ್ನು ಮುಂದೂಡಿದೆ.

ರಾಜ್ಯ ಸರ್ಕಾರ, ಸಿಬಿಐ ತನಿಖೆಗೆ ಒಪ್ಪಿಗೆ ನೀಡಿದ ನಂತರ ಕೇಂದ್ರ ತನಿಖಾ ಸಂಸ್ಥೆ 2020ರಲ್ಲಿ ಭ್ರಷ್ಟಾಚಾರ ತಡೆ ಕಾಯ್ದೆಯಡಿ ಡಿಕೆಶಿ ವಿರುದ್ಧ ಪ್ರಕರಣ ದಾಖಲಿಸಿತ್ತು.

ವಿಧಾನಸಭೆ ಚುನಾವಣೆ ದಿನಾಂಕ ಪ್ರಕಟವಾಗಿರುವುದರಿಂದ ಶಿವಕುಮಾರ್ ಅವರ ವಿರುದ್ಧ ಕಾನೂನು ಕ್ರಮ ಜರುಗಿಸಲು ಸಿಬಿಐಗೆ ಸರ್ಕಾರ ಅನುಮತಿ ನೀಡಿದ್ದರ ವಿರುದ್ಧ ಸಲ್ಲಿಸಿರುವ ಅರ್ಜಿಗೆ ಆಕ್ಷೇಪಣೆ ಸಲ್ಲಿಸಲು ಇನ್ನಷ್ಟು ಕಾಲಾವಕಾಶ ಬೇಕು ಎಂದು ಸರ್ಕಾರಿ ವಕೀಲರು ನ್ಯಾಯಾಲಯಕ್ಕೆ ತಿಳಿಸಿದ್ದಾರೆ.

ಸರ್ಕಾರಿ ವಕೀಲರು ನಾಲ್ಕು ವಾರಗಳ ಕಾಲಾವಕಾಶ ಕೋರಿದ್ದರು. ಆದರೆ ಕೋರ್ಟ್ ಏಪ್ರಿಲ್ 6ರ ವರೆಗೆ ಕಾಲಾವಕಾಶ ನೀಡಿ, ವಿಚಾರಣೆಯನ್ನು ಏಪ್ರಿಲ್ 6ಕ್ಕೆ ಮುಂದೂಡಿದೆ.

## ಕಾಂಗ್ರೆಸ್ ಮತ್ತೆ ಅಧಿಕಾರ ಹಿಡಿಯಲು ಸಾಧ್ಯವಿಲ್ಲ: ಸಚಿವ ಶ್ರೀರಾಮುಲು



ಬಳ್ಳಾರಿ: ಈಗಾಗಲೇ ಘೋಷಣೆಯಾಗಿರುವ ಕರ್ನಾಟಕ ವಿಧಾನಸಭೆ ಚುನಾವಣೆಗೆ ಬಳ್ಳಾರಿ ಗ್ರಾಮಾಂತರ ಕ್ಷೇತ್ರದಿಂದ ಸ್ಪರ್ಧಿಸಲು ನನಗೆ ಟಿಕೆಟ್ ಘೋಷಣೆ ಆಗಿಲ್ಲವೆಂದು ಜಿಲ್ಲಾ ಉಸ್ತುವಾರಿ ಸಚಿವ ಬಿ.ಶ್ರೀರಾಮುಲು ತಿಳಿಸಿದರು.

ನಗರದ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈಗಾಗಲೇ ಗ್ರಾಮೀಣ ಕ್ಷೇತ್ರದಿಂದ ಸ್ಪರ್ಧಿಸಲು ಇಚ್ಛೆ ವ್ಯಕ್ತಪಡಿಸಿ ಕ್ಷೇತ್ರದಾದ್ಯಂತ ಬಿಜೆಪಿ ಪರ ಪ್ರಚಾರ ಕಾರ್ಯ ಆರಂಭಿಸಿದ್ದೇನೆ. ಪಕ್ಷದಿಂದ ನನಗೆ ಇನ್ನೂ ಹಸಿರು ನಿಶಾನೆ ತೋರಿಲ್ಲ.

ಈ ಹಿಂದೆ ಗ್ರಾಮೀಣ ಕ್ಷೇತ್ರದಿಂದ ಸಣ್ಣ ಪಕ್ಕಿರಪ್ಪ ಸ್ಪರ್ಧಿಸಿ ಕೇವಲ 1600 ಮತಗಳ ಅಂತರದಿಂದ ಸೋತಿದ್ದರು. ನನ್ನ ಸೋದರ ಓಬಳೇಶ್ ಕೂಡ ಸ್ಪರ್ಧಿಸಿ ಕೆಲವೇ ಮತಗಳ ಅಂತರದಿಂದ ಪರಾಭವಗೊಂಡಿದ್ದರು. ನನ್ನ ಜನ್ಮಭೂಮಿ, ಕರ್ಮಭೂಮಿ, ಪುಣ್ಯಭೂಮಿ ಗ್ರಾಮೀಣ ಕ್ಷೇತ್ರವಾಗಿದೆ ಎಂದರು.

ಆಡಳಿತಾರೂಢ ಬಿಜೆಪಿಯಿಂದ ಅಧಿಕಾರ ಕಿತ್ತುಕೊಳ್ಳಬೇಕೆಂದು ಹೊರಟಿರುವ ಮಾಜಿ ಸಿಎಂ ಸಿದ್ಧರಾಮಯ್ಯ ಮತ್ತು ಕೆಪಿಸಿಸಿ ಅಧ್ಯಕ್ಷ ಡಿಕೆ ಶಿವಕುಮಾರ್ ಕನಸು ಭಗ್ನವಾಗುವುದು ಖಚಿತ. ಅವರು ಏನೇ ಹರಸಾಹಸ ಮಾಡಿದರೂ ಕಾಂಗ್ರೆಸ್ ಪಕ್ಷ ಮತ್ತೆ ಅಧಿಕಾರ ಹಿಡಿಯಲು ಸಾಧ್ಯವಿಲ್ಲ.

ಅವರೇ ಆರಂಭಿಸಿದ್ದ ಪ್ರಜಾಧ್ವನಿ ಬಸ್‌ನ ಹಾರ್ನ್ ಕ್ಷೀಣಿಸಿ, ಅಡಗಿ ಹೋಗಿದೆ. ಕಾಂಗ್ರೆಸ್‌ನವರ ಪ್ರಜಾ ಧ್ವನಿ ಬಸ್ ಪಂಕ್ಚರ್ ಆಗಿ ಎಲ್ಲೋ ಒಂದು ಕಡೆ ನಿಂತು ಹೋಗಿದೆ ಎಂದು ಲೇವಡಿ ಮಾಡಿದ ಅವರು, ಅವಳಿ ಜಿಲ್ಲೆಗಳಾದ ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳಲ್ಲಿ ಜನರಿಗೆ ಬಿಜೆಪಿ ಪರವಾಗಿ ಒಲವಿದೆ. ಯಾವುದೇ ಆತಂಕವಿಲ್ಲದೇ ಚುನಾವಣೆ ಎದುರಿಸುತ್ತೇವೆ ಎಂದರು.

ಪ್ರಜಾತಂತ್ರ ವ್ಯವಸ್ಥೆಯಲ್ಲಿ ಜನಪ್ರತಿನಿಧಿಗಳನ್ನು ಆಯ್ಕೆ ಮಾಡುವುದು ಒಂದು ಕಾನೂನಾತ್ಮಕ ಕ್ರಿಯೆ. ನಮ್ಮ ಪಕ್ಷದ 30 ಜಿಲ್ಲೆಗಳ ಅಭ್ಯರ್ಥಿಗಳ ಪಟ್ಟಿಯನ್ನು ಆಯ್ಕೆ ಮಾಡಲು ರಾಜ್ಯ ಹಾಗೂ ಕೇಂದ್ರದ ನಾಯಕರು ಕ್ರಮ ಕೈಗೊಳ್ಳುತ್ತಾರೆ. ಕೋರ್ ಕಮಿಟಿಯಲ್ಲಿ ಚರ್ಚೆ ಮಾಡಿದ ಬಳಿಕ ಅಭ್ಯರ್ಥಿಗಳ ಪಟ್ಟಿ ಸಿದ್ಧಗೊಳ್ಳುತ್ತದೆ. ಮುಂದಿನ ವಾರ ಬಹುಶಃ ಪಟ್ಟಿ ಬಿಡುಗಡೆಯಾಗಬಹುದು. ಯಾರು? ಎಲ್ಲಿ ನಿಲ್ಲಬೇಕೆನ್ನುವುದು ಪಕ್ಷವೇ ನಿರ್ಣಯ ಕೈಗೊಳ್ಳುತ್ತದೆ.

ಈ ಬಾರಿಯೂ ಬಿಜೆಪಿ ಅಧಿಕಾರಕ್ಕೆ ಬರುತ್ತದೆ ಎನ್ನುವ ವಿಶ್ವಾಸ ನನ್ನಲ್ಲಿದೆ. ಎಲ್ಲ ಸಮುದಾಯಗಳಿಗೆ ನಮ್ಮ ಸರ್ಕಾರ ಮೀಸಲಾತಿ ನೀಡಿದೆ. ಎಲ್ಲರಿಗೂ ಸಾಮಾಜಿಕ ನ್ಯಾಯದಡಿ ಸ್ಥಾನಮಾನ ನೀಡಲಾಗಿದೆ.

ಬಿಜೆಪಿಯಿಂದ ಈಗಾಗಲೇ ರಾಜ್ಯದಾದ್ಯಂತ ಸಂಕಲ್ಪ ಯಾತ್ರೆ, ವಿಜಯ ಯಾತ್ರೆ ಮತ್ತು ಸಂಗಮ ಯಾತ್ರೆಗಳನ್ನು ಮಾಡಲಾಗಿದೆ. ದಾವಣಗೆರೆಯಲ್ಲಿ ಅಭೂತಪೂರ್ವ ಯಶಸ್ಸು ಸಿಕ್ಕಿದೆ. ಭಾರತದ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಪಕ್ಷಕ್ಕೆ ವರ್ಚಸ್ಸು, ಹುಮ್ಮಸ್ಸು ತಂದುಕೊಟ್ಟಿದ್ದಾರೆ ಎಂದರು.

## ಏಷ್ಯಾದ ಅತಿ ಉದ್ದದ ವನ್ಯಜೀವಿ ಕಾರಿಡಾರ್ ಡೆಹ್ರಾಡೂನ್–ದೆಹಲಿ ಎಕ್ಸ್‌ಪ್ರೆಸ್‌ವೇ ಅಕ್ಟೋಬರ್ ಗೆ ರೆಡಿ



ಡೆಹ್ರಾಡೂನ್: ಡೆಹ್ರಾಡೂನ್–ದೆಹಲಿ ಎಕ್ಸ್‌ಪ್ರೆಸ್‌ವೇ ಏಷ್ಯಾದ ಅತಿ ಉದ್ದದ ವನ್ಯಜೀವಿ ಕಾರಿಡಾರ್ ಆಗಿದ್ದು ಇದೇ ಅಕ್ಟೋಬರ್ ವೇಳೆಗೆ ದೆಹಲಿ–ಡೆಹ್ರಾಡೂನ್ ಎಕ್ಸ್‌ಪ್ರೆಸ್‌ವೇ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸಲು ಗುರಿಯನ್ನು ನಿಗದಿಪಡಿಸಲಾಗಿದೆ.

ಈ ಎಕ್ಸ್‌ಪ್ರೆಸ್‌ವೇ ನಿರ್ಮಾಣದ ನಂತರ ದೆಹಲಿಯಿಂದ ಡೆಹ್ರಾಡೂನ್ ಗೆ ಪ್ರಯಾಣ ಸಮಯ 6 ಗಂಟೆಯಿಂದ ಕೇವಲ ಎರಡೂವರೆ ಗಂಟೆಗೆ ಇಳಿಯಲಿದೆ. ಡೆಹ್ರಾಡೂನ್‌ನಿಂದ ಉತ್ತರ ಪ್ರದೇಶದ ಗಣೇಶಪುರದವರೆಗಿನ ಸಂಪೂರ್ಣ ಪ್ರದೇಶವು ರಾಜಾಜಿ ಹುಲಿ ಸಂರಕ್ಷಿತ ಅರಣ್ಯ ಪ್ರದೇಶದ ಅಡಿಯಲ್ಲಿ ಬರುತ್ತದೆ. ಇದು ಸುಮಾರು 20 ಕಿಲೋಮೀಟರ್ ಪ್ರದೇಶವಾಗಿದೆ. ಎಕ್ಸ್‌ಪ್ರೆಸ್‌ವೇಯ ಎರಡೂ ಬದಿಯ ದಟ್ಟ ಅರಣ್ಯದ ಭಾಗದಲ್ಲಿ ವನ್ಯಜೀವಿಗಳ ಓಡಾಟ ಇರಲಿದೆ. ಈ ಕಾರಣದಿಂದಲೇ 12 ಕಿ.ಮೀ ದೂರದವರೆಗೆ ಪಿಲ್ಲರ್‌ಗಳನ್ನು ನಿರ್ಮಿಸಲಾಗಿದ್ದು ಇದರಿಂದಾಗಿ ವನ್ಯಜೀವಿಗಳು ಪಿಲ್ಲರ್ ನ ಕೆಳಗೆ ಸಲಿಸಾಗಿ ಚಲಿಸಬಹುದಾಗಿದೆ. ಇನ್ನು ಏಳು ಕಿ.ಮೀ ವ್ಯಾಪ್ತಿಯಲ್ಲಿ ಮಾತ್ರ ಮೈದಾನದಲ್ಲಿ ಸಂಚಾರ ಸಾಗಲಿದೆ.

ಡೆಹ್ರಾಡೂನ್ ನ ಆಶಾರೋಡಿಯಿಂದ ದಾತ್ ಕಾಳಿ ದೇವಸ್ಥಾನದವರೆಗೆ ತಲಾ 200 ಮೀಟರ್‌ಗಳ ಎರಡು ಆನೆ ಕಾರಿಡಾರ್‌ಗಳನ್ನು ನಿರ್ಮಿಸಲಾಗುತ್ತಿದೆ. ಇದರ ಎತ್ತರ ಏಳು ಮೀಟರ್ ಆಗಿರಲಿದ್ದು ಈ ಮೂಲಕ ಆನೆಗಳು ಕೂಡ ಈ ರಸ್ತೆಯಿಂದ ಇನ್ನೊಂದು ಬದಿಗೆ ಬರಲು ಸಾಧ್ಯವಾಗುತ್ತದೆ. ಆನೆ ಕಾರಿಡಾರ್‌ನ ಶೇ 50ರಷ್ಟು ಕಾಮಗಾರಿ ಪೂರ್ಣಗೊಂಡಿದೆ. ಇದಲ್ಲದೆ, ಆಶಾರೋಡಿಯಿಂದ ದಾಟ್ ಕಾಳಿ ಮಂದಿರದವರೆಗೆ ಆರು ಸಣ್ಣ ಪ್ರಾಣಿಗಳ ಅಂಡರ್‌ಪಾಸ್‌ಗಳನ್ನು ಸಹ ನಿರ್ಮಿಸಲಾಗುತ್ತಿದೆ.

ಹುಲಿಗಳು, ಗುಲ್ದಾರ್‌ಗಳು, ಚಿತಾಲ್‌ಗಳು ಮತ್ತು ಇತರ ಸಣ್ಣ ವನ್ಯಜೀವಿಗಳು ಇವುಗಳ ಮೂಲಕ ಸುಲಭವಾಗಿ ಹಾದುಹೋಗಬಹುದು. ಎಕ್ಸ್‌ಪ್ರೆಸ್‌ವೇ ಯೋಜನೆಯಲ್ಲಿ, ಹಾವು, ಚೇಳು ಮತ್ತು ನೆಲದ ಮೇಲೆ ಹರಿದಾಡುವ ಇತರ ಸೂಕ್ಷ್ಮಾಣು ಜೀವಿಗಳಿಗಾಗಿ ವಿಶೇಷವಾಗಿ 12 ಸಣ್ಣ ಅಂಡರ್‌ಪಾಸ್‌ಗಳನ್ನು ನಿರ್ಮಿಸಲಾಗುತ್ತಿದೆ. ಇದು ಮಳೆಗಾಲದಲ್ಲಿ ನೀರಿನ ಒಳಚರಂಡಿಯಾಗಿಯೂ ಕಾರ್ಯನಿರ್ವಹಿಸುತ್ತದೆ. ಡೆಹ್ರಾಡೂನ್‌ನ ವೈಲ್ಡ್‌ಲೈಫ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾದಿಂದ ಮೂರು ವರ್ಷಗಳ ಅಧ್ಯಯನದ ನಂತರ ಆಶಾರೋಡಿ ಪ್ರದೇಶದಲ್ಲಿ ನಿರ್ಮಾಣವಾಗುತ್ತಿರುವ ಎರಡು ಆನೆ ಕಾರಿಡಾರ್‌ಗಳಿಗೆ ಸ್ಥಳವನ್ನು ಆಯ್ಕೆ ಮಾಡಲಾಗಿದೆ.

ಈ ಸಂದರ್ಭದಲ್ಲಿ ಸಂಸ್ಥೆಯು ಸುಮಾರು ಮೂರೂವರೆ ಕಿಮೀ ಪ್ರದೇಶದಲ್ಲಿ ಹಲವೆಡೆ ಟ್ರ್ಯಾಪ್ ಕ್ಯಾಮೆರಾಗಳನ್ನು ಅಳವಡಿಸಿದೆ. ಅದರ ಆಧಾರದ ಮೇಲೆ ಈ ಕಾರಿಡಾರ್‌ಗಳನ್ನು ಸಿದ್ಧಪಡಿಸಲಾಗುತ್ತಿದೆ.

ಎನ್ ಎಚ್ ಎ ಐ–ಡೆಹ್ರಾಡೂನ್ ನ ಯೋಜನಾ ನಿರ್ದೇಶಕ ಪಿ ಕೆ ಮೌರ್ಯ ದಿ ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್‌ಗೆ ಮಾಹಿತಿ ನೀಡಿದ್ದು ವಾಹನಗಳ ಹೆಡ್‌ಲೈಟ್‌ಗಳು, ಹಾರ್ನ್ ಮತ್ತು ವಾಹನಗಳ ಶಬ್ದಗಳು ವನ್ಯಜೀವಿಗಳಗಳಿಗೆ ಕಿರಿಕಿರಿ ಉಂಟು ಮಾಡುತ್ತದೆ. ಹೀಗಾಗಿ ಇದನ್ನು ಎನ್‌ಎಚ್‌ಎಐ ಶಬ್ದ ತಡೆ ರೂಪದಲ್ಲಿ ಪರಿಹರಿಸಿದ್ದು ಇದಕ್ಕಾಗಿ ಫೈಬರ್ ಶೀಟ್ ಗಳನ್ನು ಬಳಸಲಾಗುತ್ತಿದೆ. ಇದು ಪಾಲಿಕಾರ್ಬೊನೇಟ್ ವಸ್ತುಗಳಿಂದ ಮಾಡಲ್ಪಟ್ಟಿದ್ದು ಹೆದ್ದಾರಿಯ ಎರಡೂ ಬದಿಯಲ್ಲಿ ನಾಲ್ಕು ಮೀಟರ್ ಎತ್ತರದವರೆಗೆ ಇದನ್ನು ಅಳವಡಿಸಲಾಗುವುದು ಎಂದರು.

## ಬಿಜೆಪಿ ಸೇರ್ಪಡೆಯಾದ ಎ.ಟಿ.ರಾಮಸ್ವಾಮಿ



ನವದೆಹಲಿ: ಮಾಜಿ ಶಾಸಕ ಎ.ಟಿ.ರಾಮಸ್ವಾಮಿ ಶನಿವಾರ ಅಧಿಕೃತವಾಗಿ ಬಿಜೆಪಿಗೆ ಸೇರ್ಪಡೆಯಾಗಿದ್ದಾರೆ.

ನಿನ್ನೆಯಷ್ಟೇ ಜೆಡಿಎಸ್ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದ್ದ ಎ.ಟಿ.ರಾಮಸ್ವಾಮಿ ಶನಿವಾರ ನವದೆಹಲಿಯ ಬಿಜೆಪಿ ಕಚೇರಿಯಲ್ಲಿ ಕೇಂದ್ರ ಸಚಿವ ಅನುರಾಗ್ ಠಾಕೂರ್ ಸಮ್ಮುಖದಲ್ಲಿ ಬಿಜೆಪಿಗೆ ಸೇರ್ಪಡೆಯಾದರು.

ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ರಾಮಸ್ವಾಮಿ, ಯಾವುದೇ ಷರತ್ತು ಹಾಕದೇ ಬಿಜೆಪಿ ಸೇರ್ಪಡೆಯಾಗಿದ್ದೇನೆ. ಪ್ರಧಾನಿ ಮೋದಿ ಅವರ ಅಭಿವೃದ್ಧಿ ಕೆಲಸ ನೋಡಿ ಬಿಜೆಪಿಗೆ ಸೇರಿದೇನೆ. ಇಂದು ಸಂಜೆ ಅಥವಾ ನಾಳೆ ಬೆಳಿಗ್ಗೆ ಪ್ರಧಾನಿ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಹಾಗೂ ಜೆಪಿ ನಡ್ಡಾ ಅವರನ್ನು ಭೇಟಿಯಾಗಿ ಅವರ ಆಶಿರ್ವಾದ ಪಡೆಯುತ್ತೇನೆ ಎಂದು ಹೇಳಿದರು.

## ಜೈಲುಪಾಲಾದ ಮಾಡಾಳ್ ವಿರೂಪಾಕ್ಷಪ್ಪ




ಬೆಂಗಳೂರು: ಭ್ರಷ್ಟಾಚಾರ ಪ್ರಕರಣದಲ್ಲಿ ಲೋಕಾಯುಕ್ತ ಪೊಲೀಸರಿಂದ ಬಂಧಿಸಲ್ಪಟ್ಟಿದ್ದ ಬಿಜೆಪಿ ಶಾಸಕ ಮಾಡಾಳ್ ವಿರೂಪಾಕ್ಷಪ್ಪ ಅವರಿಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದ್ದು, ಶಾಸಕರು ಜೈಲುಪಾಲಾಗಿದ್ದಾರೆ.

ಮಾಡಾಳ್ ವಿರೂಪಾಕ್ಷಪ್ಪ ಅವರನ್ನು ಲೋಕಾಯುಕ್ತ ಕಸ್ಟಡಿಗೆ ವಹಿಸಿ ಈ ಹಿಂದೆ ಬೆಂಗಳೂರಿನ ಜನಪ್ರತಿನಿಧಿಗಳ ಕೋರ್ಟ್ ಆದೇಶ ನೀಡಿತ್ತು. ಶನಿವಾರ ಮಾಡಾಳ್ ವಿರೂಪಾಕ್ಷಪ್ಪ ಅವರ ಲೋಕಾಯುಕ್ತ ಕಸ್ಟಡಿ ಅವಧಿ ಮುಗಿದ ಹಿನ್ನೆಲೆಯಲ್ಲಿ ಅವರನ್ನು ಜನಪ್ರತಿನಿಧಿಗಳ ವಿಶೇಷ ಕೋರ್ಟ್ ಗೆ ಹಾಜರುಪಡಿಸಲಾಯಿತು. ಈ ವೇಳೆ ಕೋರ್ಟ್ ಮಾಡಾಳ್ ವಿರೂಪಾಕ್ಷಪ್ಪ ಅವರನ್ನು ನ್ಯಾಯಾಂಗ ಬಂಧನ ವಿಧಿಸಿ ಆದೇಶ ಹೊರಡಿಸಿದೆ.

ಮಾಡಾಳ್ ಅವರಿಗೆ ಏಪ್ರಿಲ್ 11ರವರೆಗೆ ನ್ಯಾಯಾಂಗ ಬಂಧನ ವಿಧಿಸಿ ಆದೇಶ ಹೊರಡಿಸಲಾಗಿದೆ.

## ವೀಕೆಂಡ್ ಟ್ರಿಪ್: ಇಬ್ಬರು ಯುವತಿ, ಓರ್ವ ಯುವಕ ನೀರುಪಾಲು



ಚಿಕ್ಕಬಳ್ಳಾಪುರ: ವೀಕೆಂಡ್ ಟ್ರಿಪ್ ಗೆ ತೆರಳಿದ್ದ ಬೆಂಗಳೂರಿನ ಇಬ್ಬರು ಯುವತಿಯವರು ಹಾಗೂ ಓರ್ವ ಯುವಕ ಚಿಕ್ಕಬಳ್ಳಾಪುರದ ಶ್ರೀನಿವಾಸ ಸಾಗರ ಡ್ಯಾಂನಲ್ಲಿ ಮುಳುಗಿ ಸಾವನ್ನಪ್ಪಿರುವ ದಾರುಣ ಘಟನೆ ಶನಿವಾರ ನಡೆದಿದೆ.

ಒಟ್ಟು 6 ವಿದ್ಯಾರ್ಥಿಗಳು ಇಂದು ಬೆಂಗಳೂರಿನಿಂದ ಶ್ರೀನಿವಾಸ ಸಾಗರ ಡ್ಯಾಂ ಟ್ರಿಪ್ ಗೆ ಹೋಗಿದ್ದು, ಈ ವೇಳೆ ಈಜಲು ನೀರಿಗೆ ಇಳಿದಿದ್ದ ಮೂವರು ವಿದ್ಯಾರ್ಥಿಗಳು ನೀರು ಪಾಲಾಗಿದ್ದಾರೆ. ಮೃತರನ್ನು ಪೂಜಾ, ರಾಧಿಕಾ ಹಾಗೂ ಇಮ್ರಾನ್ ಎಂದು ಗುರುತಿಸಲಾಗಿದೆ.

ಬೆಂಗಳೂರಿನಲ್ಲಿ ಡಿ ಫಾರ್ಮಸಿ ಓದುತ್ತಿದ್ದ ಈ ವಿದ್ಯಾರ್ಥಿಗಳು ಬೈಕ್‌ನಲ್ಲಿ ಶ್ರೀನಿವಾಸ ಸಾಗರ ಡ್ಯಾಂ ತೆರಳಿದ್ದು, ಮಧ್ಯಾಹ್ನದ ವೇಳೆ ಡ್ಯಾಮ್‌ನಲ್ಲಿ ಈಜಲು ಮುಂದಾಗಿದ್ದಾರೆ. ಈ ವೇಳೆ ಡ್ಯಾಮ್‌ನ ಒಳಗಿದ್ದ ಕಲ್ಲಿನ ಮೇಲೆ ನಿಂತುಕೊಂಡು ಒಬ್ಬರನ್ನೊಬ್ಬರು ಕೈ ಹಿಡಿದುಕೊಂಡು ಆಳವಿರುವ ಪ್ರದೇಶಕ್ಕೆ ಹೋಗಿದ್ದಾರೆ. ಆದರೆ, ಈ ವೇಳೆ ಒಬ್ಬರು ಕಾಲುಜಾರಿ ಬಿದ್ದಿದ್ದಾರೆ.

ಅವರನ್ನು ರಕ್ಷಣೆ ಮಾಡಲು ಎಲ್ಲರೂ ಕೈ–ಕೈ ಹಿಡಿದುಕೊಂಡೇ ಸರಪಳಿ ರೀತಿಯಲ್ಲಿ ಮುಂದಾಗಿದ್ದಾರೆ. ಈ ವೇಳೆ ಮೊದಲು ಕಾಲು ಜಾರಿ ಬಿದ್ದ ವಿದ್ಯಾರ್ಥಿನಿಯ ಜೊತೆಗೆ ಮತ್ತಿಬ್ಬರು ನೀರಿನಲ್ಲಿ ಮುಳುಗಿ ಸಾವನ್ನಪ್ಪಿದ್ದಾರೆ.

ಉಳಿದಂತೆ ಇನ್ನು ಮೂವರು ಪ್ರಾಣಾಪಾಯದಿಂದ ಪಾರಾಗಿದ್ದಾರೆ.

## ಪತ್ನಿ ಕಾಟದಿಂದ ಬೇಸತ್ತು ಲಕ್ಷಾಂತರ ಹಣದೊಂದಿಗೆ ಗೋವಾಗೆ ಹೊರಟಿದ್ದ ವ್ಯಕ್ತಿ ಬೆಳಗಾವಿಯಲ್ಲಿ ಲಾಕ್



ಬೆಳಗಾವಿ : ಗೂಗಲ್ ಮ್ಯಾಪ್ ಸಹಾಯದಿಂದ ಗೋವಾಗೆ ಹೊರಟಿದ್ದ ವ್ಯಕ್ತಿಯೋರ್ವ ಬೆಳಗಾವಿ ಚೆಕ್‌ಪೋಸ್ಟ್ ನಲ್ಲಿ ತಗ್ಲಾಕ್ಕೊಂಡ ಘಟನೆ ನಡೆದಿದೆ.

ಬೆಳಗಾವಿಯ ಕರ್ನಾಟಕ ಚೌಕ್ ಬಳಿಯ ಚೆಕ್‌ಪೋಸ್ಟ್ ನಲ್ಲಿ ರೂ. 26 ಲಕ್ಷ ಹಣ ಜಪ್ತಿ ಮಾಡಿಕೊಳ್ಳಲಾಗಿದ್ದು, ಆದಾಯ ತೆರಿಗೆ ಇಲಾಖೆಗೆ ಪ್ರಕರಣ ವರ್ಗಾಯಿಸಲಾಗಿದೆ.

ತಗ್ಲಾಕ್ಕೊಂಡ ವ್ಯಕ್ತಿಯು ಓರ್ವ ಗುತ್ತಿಗೆದಾರನಾಗಿದ್ದು, ಪೊಲೀಸರಿಗೆ ಮಾಹಿತಿ ನೀಡಿರುವ ಗುತ್ತಿಗೆದಾರ ತಾನು ಒಯ್ಯುತ್ತಿದ್ದ ಹಣಕ್ಕೆ ದಾಖಲೆ ಇದೆ ಎಂದಿದ್ದಾರೆ.

ವ್ಯಕ್ತಿ ತಾನು ಮುಂಬೈನಲ್ಲಿ ಪ್ರಥಮ ದರ್ಜೆ ಗುತ್ತಿಗೆದಾರ ಆಗಿದ್ದೇನೆ ಎಂದು ತಿಳಿಸಿದ್ದಾನೆ. ಅಲ್ಲದೇ ಇಷ್ಟೊಂದು ಮೊತ್ತದ ನಗದು ಏಕೆ ಒಯ್ಯುತ್ತಿದ್ದೀಯಾ ಎಂದು ಪೊಲೀಸರ ಪ್ರಶ್ನೆಗೆ ಹೆಂಡತಿ ಕಾಟ ತಾಳಲಾರದೇ ನೆಮ್ಮದಿ ಅರಸಿ ಹೋಗುತ್ತಿದ್ದೇನೆ ಎಂದಿದ್ದಾನೆಂದು ಹೇಳಲಾಗುತ್ತಿದೆ.

ಆನ್‌ಲೈನ್ ಪೇಮೆಂಟ್ ಮಾಡಿದ್ರೆ ಬ್ಯಾಂಕ್ ಟ್ರಾನ್ಸಾಕ್ಷನ್ ಮೂಲಕ ತನ್ನ ಪತ್ನಿಗೆ ವಿಷಯ ಗೊತ್ತಾಗುತ್ತದೆ. ಹೀಗಾಗಿ ಹೆಂಡತಿ ಕಾಟ ತಾಳಲಾರದೇ ಗೋವಾಗೆ ಹೊರಟಿದ್ದೆ ಎಂದು ತಿಳಿಸಿದ್ದಾರೆ.

ಗೂಗಲ್ ಮ್ಯಾಪ್ ನಿಂದಾಗಿ ತಪ್ಪಾಗಿ ಸಿಟಿಯೊಳಗೆ ಪ್ರವೇಶ ಮಾಡಿದ್ದಾಗಿ ಹೇಳಿದ್ದಾರೆ. ಇತ್ತ ಹಣದ ಮೂಲದ ಬಗ್ಗೆ ಪೊಲೀಸರು ಮತ್ತು ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ತನಿಖೆ ನಡೆಸುತ್ತಿದ್ದಾರೆ.

ಮಾರ್ಕೆಟ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

## ಬಾಂಬೆ ಹೈಕೋರ್ಟ್ ಮಹತ್ವದ ಆದೇಶ: ಲಿಂಗ ಪರಿವರ್ತಿತ ಮಹಿಳೆಯೂ ಪರಿಹಾರ ಪಡೆಯಲು ಅರ್ಹ ಎಂದು ಆದೇಶ




ಮುಂಬೈ: ಶಸ್ತ್ರ ಚಿಕಿತ್ಸೆ ಮೂಲಕ ಲಿಂಗ ಪರಿವರ್ತನೆಗೊಂಡ ಮಹಿಳೆಯೂ ಸಹ ಕೌಟುಂಬಿಕ ದೌರ್ಜನ್ಯ ತಡೆ ಕಾಯ್ದೆ ಅಡಿ ಪರಿಹಾರ ಪಡೆಯಲು ಅರ್ಹರಾಗಿದ್ದಾರೆ ಎಂದು ಬಾಂಬೆ ಹೈಕೋರ್ಟ್ ಮಹತ್ವದ ಆದೇಶ ನೀಡಿದೆ.

ಪ್ರಕರಣದ ವಿವರ: 2016ರಲ್ಲಿ ಶಸ್ತ್ರ ಚಿಕಿತ್ಸೆ ಮೂಲಕ ಹೆಣ್ಣಾಗಿ ಪರಿವರ್ತನೆಯಾಗಿದ್ದ ಸಂತ್ರಸ್ತೆ ಅದೇ ವರ್ಷ ಮದುವೆಯಾಗಿದ್ದರು. ಆದರೆ ಎರಡು ವರ್ಷಗಳ ಬಳಿಕ ದಂಪತಿ ನಡುವೆ ಭಿನ್ನಾಭಿಪ್ರಾಯ ಬಂದು ಅವರುಗಳು ದೂರವಾಗಿದ್ದರು.

ಈ ಹಿನ್ನಲೆಯಲ್ಲಿ ಪರಿಹಾರ ಕೋರಿ ಸಂತ್ರಸ್ತೆ ಮ್ಯಾಜಿಸ್ಟ್ರೇಟ್ ನ್ಯಾಯಾಲಯದ ಮೊರೆ ಹೋಗಿದ್ದು, 12,000 ರೂಪಾಯಿ ಮಾಸಿಕ ಜೀವನಾಂಶ ಪಾವತಿಸುವಂತೆ ಪತಿಗೆ ಸೂಚಿಸಲಾಗಿತ್ತು.

ಇದನ್ನು ಪ್ರಶ್ನಿಸಿ ಪತಿ ಬಾಂಬೆ ಹೈಕೋರ್ಟ್ ಮೆಟ್ಟಿಲೇರಿದ್ದು, ಇದೀಗ ಮ್ಯಾಜಿಸ್ಟ್ರೇಟ್ ನ್ಯಾಯಾಲಯದ ಆದೇಶವನ್ನು ಎತ್ತಿ ಹಿಡಿಯಲಾಗಿದೆ. ಪತ್ನಿಯಿಂದ ದೂರವಾಗಿರುವ ಪತಿ ಆಕೆಗೆ ಜೀವನಾಂಶ ನೀಡಬೇಕು ಎಂದು ಸೂಚಿಸಿದೆ.

## ಕೋವಿಡ್–19 2,994 ಹೊಸ ಕೇಸ್ ಪತ್ತೆ



ನವದೆಹಲಿ: ಭಾರತದಲ್ಲಿ ಮಹಾಮಾರಿ ಕೊರೋನಾ ದಿನೇ ದಿನೇ ಏರಿಕೆಯಾಗುತ್ತಲೇ ಇದ್ದು, ದೇಶದಲ್ಲಿ ಕಳೆದ 24 ಗಂಟೆಗಳಲ್ಲಿ 2,994 ಹೊಸ ಪ್ರಕರಣಗಳು ಪತ್ತೆಯಾಗಿವೆ.

ಇದರೊಂದಿಗೆ ದೇಶದಲ್ಲಿ ಕೋವಿಡ್ ಪ್ರಕರಣಗಳ ಒಟ್ಟು ಸಂಖ್ಯೆ 4,47,18,781ಕ್ಕೆ ಏರಿಕೆಯಾಗಿದೆ. ಅಲ್ಲದೇ, ಕೋವಿಡ್ ನಿಂದ ಸಾವನ್ನಪ್ಪಿರುವವರ ಒಟ್ಟು ಸಂಖ್ಯೆ 5,30,876ಕ್ಕೆ ಏರಿಕೆಯಾಗಿದೆ. ದೇಶದಲ್ಲಿ ಸೋಂಕಿತರ ಸಂಖ್ಯೆ ಏರಿಕೆಯಾಗುತ್ತಿರುವ ಹಿನ್ನೆಲೆಯಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆ 16,354ಕ್ಕೆ ತಲುಪಿದೆ. ಈ ನಡುವೆ ಒಟ್ಟು ಚೇತರಿಸಿಕೊಂಡವರ ಸಂಖ್ಯೆ 4,41,71,551ಕ್ಕೆ ತಲುಪಿದೆ.

## ಬಳ್ಳಾರಿ ನಗರ ಕ್ಷೇತ್ರ: ವಿವಿಧ ರಾಜಕೀಯ ಪಕ್ಷಗಳ ಮುಖಂಡರ ಸಭೆ

# ಗೋಡೆಗಳ ಮೇಲೆ ರಾಜಕೀಯ ಪ್ರೇರಿತ ಕರಪತ್ರ ಅಂಟಿಸುವಂತಿಲ್ಲ: ಪಾಲಿಕೆ ಆಯುಕ್ತ ಎಸ್.ಎನ್.ರುದ್ರೇಶ್

ಬಳ್ಳಾರಿ: ಬಳ್ಳಾರಿ ನಗರ-94 ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಯಾವುದೇ ಸರ್ಕಾರಿ ಕಟ್ಟಡಗಳ ಗೋಡೆಗಳ ಮೇಲೆ ಪೇಂಟ್ ಮತ್ತು ಬಣ್ಣಗಳಿಂದ ಬರವಣಿಗೆ ಬರೆಯುವಂತಿಲ್ಲ ಮತ್ತು ರಾಜಕೀಯ ಕುರಿತಾದ ಕರಪತ್ರ ಅಂಟಿಸುವಂತಿಲ್ಲ. ಇದಕ್ಕೆ ಪ್ರತ್ಯೇಕ ಪರವಾನಿಗೆ ಪಡೆಯುವುದು ಕಡ್ಡಾಯವಾಗಿದೆ ಎಂದು ಮಹಾನಗರ ಪಾಲಿಕೆ ಆಯುಕ್ತ ಮತ್ತು ನಗರ ಕ್ಷೇತ್ರ ಚುನಾವಣಾಧಿಕಾರಿ ಎಸ್.ಎನ್.ರುದ್ರೇಶ್ ಅವರು ತಿಳಿಸಿದ್ದಾರೆ.

ಗುರುವಾರ ಮಹಾನಗರ ಪಾಲಿಕೆ ಕಚೇರಿ ಸಭಾಂಗಣದಲ್ಲಿ ವಿವಿಧ ರಾಜಕೀಯ ಪಕ್ಷಗಳ ಮುಖಂಡರುಗಳ ಜೊತೆ ನಡೆದ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಬಳ್ಳಾರಿ ನಗರ-94 ವಿಧಾನಸಭಾ ಕ್ಷೇತ್ರದಲ್ಲಿ 234 ಮತಗಟ್ಟೆ ಕೇಂದ್ರಗಳನ್ನು ಸ್ಥಾಪಿಸಲಾಗುತ್ತದೆ. ಇಲ್ಲಿ 124199 ಪುರುಷ ಮತದಾರರು, 131157 ಮಹಿಳಾ ಮತದಾರರು ಮತ್ತು 29 ಲಿಂಗತ್ವ ಅಲ್ಪಸಂಖ್ಯಾತರು ಇದ್ದು, ಒಟ್ಟು 255385 ಮತದಾರರಿದ್ದಾರೆ ಎಂದು ತಿಳಿಸಿದರು.

ಚುನಾವಣಾ ಆಯೋಗವು 80 ವರ್ಷ ಮೇಲ್ಪಟ್ಟ ವಯಸ್ಕರು ಮತ್ತು ವಿಶೇಷ ಚೇತನರು ಮತದಾನದಿಂದ ಹೊರಗುಳಿಯ ಬಾರದೆಂದು ಮನೆಯಿಂದಲೇ ಮತದಾನ ಮಾಡಲು ಅಂಚೆ ಮತದಾನ ಮಾಡಲು ಅವಕಾಶ ಕಲ್ಪಿಸಲಾಗಿದೆ.

ನೊಂದಣಿ ಪ್ರಕ್ರಿಯೆಯಲ್ಲಿ ಹೊಸದಾಗಿ ನೊಂದಾಯಿಸಿ ಕೊಳ್ಳುವವರು ಹೆಚ್ಚಳವಾದರೆ ಮತ್ತು ಒಂದು ಮತಗಟ್ಟೆ ಕೇಂದ್ರದಲ್ಲಿ 1500ಕ್ಕಿಂತ ಹೆಚ್ಚಾದರೆ, ಹೆಚ್ಚುವರಿಯಾಗಿ ಮತದಾನ ಕೇಂದ್ರವನ್ನು ಮಾಡಲಾಗುವುದು ಎಂದರು.



ಚುನಾವಣಾ ಪ್ರಯುಕ್ತ ಮಾದರಿ ನೀತಿ ಸಂಹಿತೆಯು ಜಾರಿಯಲ್ಲಿದ್ದು, ನಗರದಲ್ಲಿ ಯಾವುದೇ ಅವ್ಯವಹಾರ ನಡೆದಂತೆ ನೋಡಿಕೊಳ್ಳಲು ಬಳ್ಳಾರಿ ನಗರ ಕ್ಷೇತ್ರದಲ್ಲಿ 7 ಕಡೆ ಚೆಕ್‌ಪೋಸ್ಟ್ ಸ್ಥಾಪಿಸಲಾಗಿದೆ.

ಕೊಳಗಲ್ ರಸ್ತೆಯ ವಿಮಾನ ನಿಲ್ದಾಣ ವೃತ್ತ, ಕಾಣೆಕಲ್ ರಸ್ತೆಯ ಆಂಧ್ರಾಳ್ ಬೈಪಾಸ್ ಹತ್ತಿರ, ಮೋಕಾ ರಸ್ತೆಯ ಕೆಇಬಿ ವೃತ್ತ ಹತ್ತಿರ, ತಾಳೂರು ರಸ್ತೆಯ ಮಹಾನಂದಿ ಕೊಟ್ಟಂ ಹತ್ತಿರ, ರೂಪನಗುಡಿ ರಸ್ತೆಯ ದುರ್ಗ ವೃತ್ತದ ಹತ್ತಿರ, ಸಿರುಗುಪ್ಪ ರಸ್ತೆಯ ಕ್ಲಾಸಿಕ್ ಫಂಕ್ಷನ್ ಹಾಲ್ ಹತ್ತಿರ, ಅನಂತಪುರ ರಸ್ತೆಯ ಬೈಪಾಸ್ ವೃತ್ತದ ಹತ್ತಿರ ಸ್ಥಾಪಿಸಲಾಗಿದೆ.

ಯಾವುದೇ ವಾಹನಗಳಲ್ಲಿ 50 ಸಾವಿರಕ್ಕಿಂತ ಹೆಚ್ಚಿನ ಹಣವನ್ನು ಕಂಡುಬಂದಲ್ಲಿ ಅಂತಹ ವಾಹನಗಳನ್ನು ಜಪ್ತಿ ಮಾಡಲಾಗುವುದು ಎಂದು ತಿಳಿಸಿದರು.

ರಾಜಕೀಯ ಪಕ್ಷಗಳು ರಾತ್ರಿ 10 ರ ಮೇಲೆ ಚುನಾವಣಾ ಪ್ರಚಾರ ಮಾಡುವಂತಿಲ್ಲ. ಮತ್ತು ಚುನಾವಣಾ ಅಭ್ಯರ್ಥಿಯು 40 ಲಕ್ಷಗಳವರೆಗೆ ಚುನಾವಣಾ ಖರ್ಚು ವೆಚ್ಚ ಮಾಡಲು ಅವಕಾಶವಿರುತ್ತದೆ.

ಪಕ್ಷಗಳು ಪ್ರಚಾರ ಮಾಡುವ ಮುಂಚಿತವಾಗಿ ವಾಹನಗಳಿಗೆ ಸಂಬಂಧಿಸಿದ ದಾಖಲಾತಿಗಳನ್ನು ಹೊಂದಿ ಪರವಾನಗಿ ಪಡೆದಿರಬೇಕಾಗಿರುತ್ತದೆ. ಚುನಾವಣೆ ಪ್ರಚಾರ ಮಾಡುವ ರಾಜಕೀಯ ಪಕ್ಷಗಳು ಕಡ್ಡಾಯವಾಗಿ ಪರವಾನಿಗೆ ಪಡೆಯಬೇಕು ಎಂದರು.

ಸಭೆಯಲ್ಲಿ 94-ಬಳ್ಳಾರಿ ನಗರ ವಿಧಾನಸಭಾ ಕ್ಷೇತ್ರ ಸಹಾಯಕ ಚುನಾವಣಾಧಿಕಾರಿ ಸುಬ್ರಮಣ್ಯ ಸೇ-ರಿದಂತೆ ವಿವಿಧ ರಾಜಕೀಯ ಪಕ್ಷಗಳ ಮುಖಂಡರುಗಳು ಉಪಸ್ಥಿತರಿದ್ದರು.

## ನಾರಾ ಭರತ್ ರೆಡ್ಡಿ ಅವರ ಸಾರ್ವಜನಿಕ ಸಂದರ್ಶನ ಕಚೇರಿ ಆರಂಭ



ಬಳ್ಳಾರಿ: ಸಾಮಾಜಿಕ ಹಾಗೂ ರಾಜಕೀಯ ಕ್ಷೇತ್ರದಲ್ಲಿ ತೊಡಗಿಕೊಂಡಿರುವ ಯುವ ಉದ್ಯಮಿ ನಾರಾ ಭರತ್ ರೆಡ್ಡಿ ಅವರು ಸಾರ್ವಜನಿಕರ ಅನುಕೂಲಕ್ಕಾಗಿ ಖಾಸಗಿ ಕಚೇರಿಯೊಂದನ್ನು ಆರಂಭಿಸಿದ್ದು, ಸದರಿ ಕಚೇರಿಯಲ್ಲಿ ಪೂಜಾ ಕೈಂಕರ್ಯಗಳನ್ನು ಕೈಗೊಳ್ಳುವ ಮೂಲಕ ವಿಧ್ಯುಕ್ತವಾಗಿ ಕಾರ್ಯಾರಂಭ ಮಾಡಲಾಯಿತು.

ಗಾಂಧಿನಗರದ ಮೋಕಾ ರಸ್ತೆಯಲ್ಲಿರುವ ಅವರ ಒಡೆತನದ ಶ್ರೀರಾಘವೇಂದ್ರ ಎಂಟರಪ್ರೈಜಸ್ ಕಚೇರಿಯ ಪಕ್ಕದ ಜಾಗದಲ್ಲಿ ಈ ಕಚೇರಿ ಆರಂಭಿಸಲಾಗಿದ್ದು. ತಮ್ಮನ್ನು ಭೇಟಿ ಆಗಲು ಬರುವ ಸಾರ್ವಜನಿಕರು ಇಲ್ಲಿ ಸಂದರ್ಶಿಸಬಹುದೆಂದು ತಿಳಿಸಿದ್ದಾರೆ. ಈ ಪೂಜಾ ಸಂದರ್ಭದಲ್ಲಿ ನಾರಾ ಭರತ್ ರೆಡ್ಡಿ ಹಾಗೂ ಅವರ ಆಪ್ತರು ಭಾಗಿಯಾಗಿದ್ದರು.

## ಮತದಾನ ಜಾಗೃತಿ ಅಭಿಯಾನ



ಕೊಲ್ಹಾರ: ಚುನಾವಣಾ ಆಯೋಗ, ಜಿಲ್ಲಾ ಸ್ವಿಪ್ ಸಮಿತಿ ಹಾಗೂ ತಾಲ್ಲೂಕ ಆಡಳಿತ ಮಂಡಳಿಯ ವತಿಯಿಂದ ಶನಿವಾರ ರಂದು ಮತದಾನ ಜಾಗೃತಿ ಪ್ರಭಾತ್ ಪೇರಿ ಅಭಿಯಾನ ಕಾರ್ಯಕ್ರಮ ಜರುಗಿತು.

ಈ ವೇಳೆಯಲ್ಲಿ ತಾಲ್ಲೂಕ ದಂಡಾಧಿಕಾರಿ ರೇಣುಕಾ ಎಂ, ತಾಲ್ಲೂಕ ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿ ಎಫ್.ಎಸ್ ಪಠಾಣ, ಪ.ಪಂ ಮುಖ್ಯಾಧಿಕಾರಿ ನಿಖಿಲೇಶ ಪಾಟೀಲ್, ಗ್ರಾಮ ಲೆಕ್ಕಾಧಿಕಾರಿ ಜಿಡ್ಡಿಮನಿ ಸಹಿತ ಅನೇಕರು ಇದ್ದರು.

## 2ಬಿ ಮೀಸಲಾತಿ ರದ್ದು ಖಂಡಿಸಿ
# ಮುಸ್ಲಿಂ ಸಮಾಜದವರ ಪ್ರತಿಭಟನೆ



ಹುಕ್ಕೇರಿ: ನಗರದಲ್ಲಿ ಮುಸಲ್ಮಾನ ಬಾಂಧವರಿಂದ ತಾಲೂಕಾ ಆಡಳಿತ ಸೌಧದ ಎದುರು ಪ್ರತಿಭಟನೆ ಜರುಗಿತು.

ಮೀಸಲಾತಿಯನ್ನು ರದ್ದು ಪಡಿಸಿದ ಹಿನ್ನಲೆಯಲ್ಲಿ ಹುಕ್ಕೇರಿ ನಗರದ ಹನ್ನೊಂದು ಜಮಾತ ಸದಸ್ಯರು ಪ್ರತಿಭಟನೆ ನಡೆಸಿ ರಾಜ್ಯ ಸರ್ಕಾರ ಮತ್ತು ಮುಖ್ಯಮಂತ್ರಿ ಬಸವರಾಜ ಬೋಮ್ಮಾಯಿ ವಿರುದ್ದ ಘೋಷಣೆ ಕೂಗಿ ಮೀಸಲಾತಿ ಮುಂದುವರೆಸುವಂತೆ ಆಗ್ರಹಿಸಿದರು.

ಮುಖಂಡ ರಾಜು ನದಾಫ್ ಮಾತನಾಡಿ ರಾಜ್ಯ ಸರ್ಕಾರ ಮುಸಲ್ಮಾನರ 2ಬಿ ಮೀಸಲಾತಿ ರದ್ದು ಪಡಿಸುವ ಮೂಲಕ ಭಾರತದ ಪವಿತ್ರ ಸಂವಿಧಾನಕ್ಕೆ ಅಗೌರವ ತೋರಿದಂತಾಗಿದೆ,ಚುನಾವಣೆ ಸಂದರ್ಬದಲ್ಲಿ ಒಂದು ಕೋಮಿಗೆ ಸಂತೃಪ್ತಿ ಪಡಿಸಲು ತಗೆದುಕೊಂಡ ನಿರ್ಧಾರಕ್ಕೆ ಸಮಸ್ತ ಮುಸಲ್ಮಾನರು ಖಂಡಿಸುತ್ತಾರೆ.ರಾಜ್ಯ ಪಾಲರು ಮದ್ಯ ಪ್ರವೇಶಿಸಿ ನಮ್ಮ ಸಮುದಾಯಕ್ಕೆ ನ್ಯಾಯ ದೊರಕಿ ಬೇಕು ಎಂದರು. ಪ್ರತಿಭಟನಾಕಾರರು ತಹಸಿಲ್ದಾರ ಎಸ್ ಬಿ ಇಂಗಳೆ ಅವರಿಗೆ ಮನವಿ ಸಲ್ಲಿಸಿದರು. ಮನವಿ ಸ್ವಿಕರಿಸಿದ ತಹಸಿಲ್ದಾರ ಮುಸಲ್ಮಾನ ಸಮಾಜ ಮುಖಂಡರು ನೀಡಿದ ಮನವಿಯನ್ನು ರಾಜ್ಯಪಾಲರಿಗೆ ಕಳಿಸಿಲಾಗುವದು ಎಂದರು.ವಿವಿಧ ಜಮಾತ ಸದಸ್ಯರಾದ ಶಬ್ಬಿರ ಸನದಿ, ಬಾಬಾಜಾನ ಖಾಜಿ, ನಿಸ್ಸಾರ ಅಹಮ್ಮದ ಬಾಗವಾನ, ಸಲಿಂ ಕಳಾವಂತ, ಇರ್ಷಾದ ಮೋಕಾಶಿ, ಮಲ್ಲಿಕ ಕಬೀರ,ನಜೀರ ಮೋಮಿನ, ಸಲಿಮ ನದಾಫ್, ಯುಸೂಪ್ ಖಂಡಾಯತ್, ಆದಮ ಖಾನಜಾದೆ, ಇಮ್ರಾನ ಮೊಮಿನ, ಶಹಜಾನ ಬಡಗಾಂವಿ, ಡಿ ಆರ್ ಖಾಜಿ, ಮೊದಲಾದವರು ಉಪಸ್ಥಿತರಿದ್ದರು.

# ದೇಶಿಯ ಕಲೆ ಉಳಿಸಲು ಪ್ರಯತ್ನಿಸಿ

ಬಳ್ಳಾರಿ: ಜಿಲ್ಲೆಯಲ್ಲಿ ಮಹಾನ್ ಕಲಾವಿದರು ಸಾಧಕರಿದ್ದು ಎಲೆಮರೆಕಾಯಿಯಂತೆ ಮುಖ್ಯ ವಾಹಿನಿಗೆ ಬಾರದೆ ಇರುವರು ಅಂಥವರನ್ನು ಗುರುತಿಸುವ ಕೆಲಸ ನಗರದಲ್ಲಿ ಅತ್ಯಂತ ಕ್ರಿಯಾಶೀಲ ಸಂಸ್ಥೆ ಆಗಿರುವ ಆಲಾಪ್ ಸಂಗೀತ ಕಲಾ ಟ್ರಸ್ಟ್ ರವರು ಗುರುತಿಸಿ ಸನ್ಮಾನ ಸಲ್ಲಿಸುವುದು ಹೆಮ್ಮೆಯ ಸಂಗತಿ ಎಂದು ಇತಿಹಾಸ ಅಕಾಡೆಮಿ ಜಿಲ್ಲಾಧ್ಯಕ್ಷ ಟಿ.ಹೆಚ್.ಎಂ.ಬಸವರಾಜಸ್ವಾಮಿ ತಿಳಿಸಿದರು.

ನಗರದಲ್ಲಿ ಆಲಾಪ್ ಸಂಗೀತ ಕಲಾ ಟ್ರಸ್ಟಿಂದ ರಾಘವ ಕಲಾಮಂದಿರದಲ್ಲಿ ಟ್ರಸ್ಟ 7ನೇ ವಾರ್ಷಿಕೋತ್ಸವ ಸಂಭ್ರಮ ಹಾಗೂ ಸಾಧಕರಿಗೆ ಸನ್ಮಾನ ಸಾಂಸ್ಕೃತಿಕ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಇತ್ತೀಚೆಗೆ ವಿದೇಶಿ ಕಲೆ ಅವಳಿ ಹೆಚ್ಚಾಗಿದೆ ನಾವು ನೀವು ದೇಶಿಯ ಕಲೆಗಳನ್ನು ಉಳಿಸುವಲ್ಲಿ ಎಲ್ಲರೂ ಪ್ರಯತ್ನಿಸಬೇಕು. ಮತ್ತು ಕಲಾವಿದರ ಮಾಶಾಸನ 2000. ಬದಲು 5000 ಸಾವಿರಕ್ಕೆ ಏರಿಕೆಯಾಗಬೇಕು ಕಲಾವಿದರ ಮಾಶಾಸನ ವಯೋಮಿತಿ ಕಡಿಮೆ ಮಾಡಬೇಕು ಎಂದು ವ್ಯಕ್ತಪಡಿಸಿದರು.

ಮುಖ್ಯ ಅತಿಥಿ ನಾಡೋಜ ಬೆಳಗಲ್ಲು ವೀರಣ್ಣ ಮಾತನಾಡಿ, ಕಲಾವಿದರ ಏಳಿಗೆ ಕಲಾವಿದರು ಉಳಿವಿಗೆ ಸರ್ಕಾರ ಸಂಘ ಸಂಸ್ಥೆಗಳ ಪ್ರೋತ್ಸಾಹ ಸನ್ಮಾನ್ಯ ಅಗತ್ಯ ಎಂದು ಅಭಿಪ್ರಾಯಪಟ್ಟರು.




ಸುಗಮ ಸಂಗೀತ ಕವಿತಾ ಡಿ. ಕಗ್ಗಲ್ ತಂಡದಿಂದ ಸಮೂಹ ನೃತ್ಯ, ತುಂಗ ಗಂಗಾ ಸಾಂಸ್ಕೃತಿಕ ಕಲಾ ಟ್ರಸ್ಟ್ ವತಿಯಿಂದ ವಚನ ಗಾಯನ ಕೆ.ಜಿ .ಶಿವಕುಮಾರ್ ತಂಡದಿಂದ 'ಕುಮಾರಗೌಡ ಅಮರಾಪುರ, ಪಿ.ಸಣ್ಣ ಹೊನ್ನೂರ್ ಸಾಬ್ ಶಂಕರ ಬಂಡೆ ಇವರಿಂದ ತತ್ವಪದ ಹಾಡುಗಳನ್ನು ಹಾಡಿದರು. ಸೀತಾಪಹರಣ, ಬಯಲಾಟ ಪ್ರದರ್ಶನ ಧಾತ್ರಿರಂಗ ಸಂಸ್ಥೆ ಸಿರಿಗೇರಿ ವತಿಯಿಂದ ಮತ್ತು ಹೆಚ್.ತಿಪ್ಪೇಸ್ವಾಮಿ ನಿರ್ದೇಶನದಲ್ಲಿ ಪ್ರದರ್ಶಿಸಲಾಯಿತು.

ಸಾಧಕರಿಗೆ ಸನ್ಮಾನದಲ್ಲಿ ಬ್ಲಡ್ ಡೊನೇಷನ್ ರೆಡ್‌ಕ್ರಾಸ್ ಚೇರ್‌ಮನ್ ಬಿ.ದೇವಣ್ಣ, ಸಂಗೀತ ಶಿಕ್ಷಕ ಸಾಯಿ ಶೃತಿ ಹಂದ್ಯಾಳ್, ಹನುಮಾವ ದೂತ ಹಾರ್ಮೋನಿಯಂ ಮಾಸ್ಟರ್, ತುಂಗಾ ಗಂಗಾ ಸಾಂಸ್ಕೃತಿಕ ಕಲಾ ಟ್ರಸ್ಟ್ ಅಧ್ಯಕ್ಷ ನಾಗಭೂಷಣ ಮತ್ತು ಧಾತ್ರಿರಂಗ ಸಂಸ್ಥೆಯ ಮುಖ್ಯಸ್ಥ. ವೈ ಮಂಜುನಾಥ ಇವರಗಳನ್ನು ಸನ್ಮಾನಿಸಲಾಯಿತು.

ಕೋಟೇಶ್ವರರಾವ್ ರಾಘವ ಮೆಮೋರಿಯಲ್ ಅಸೋಸಿಯೇಷನ್ ಅಧ್ಯಕ್ಷ ರಮೇಶ್ ಗೌಡ ಪಾಟೀಲ್ ಹಿರಿಯ ರಂಗಭೂಮಿ ಕಲಾವಿದರು, ಎನ್. ಪ್ರಕಾಶ ಗೌರವ ಕಾರ್ಯದರ್ಶಿ, ರಾಘವ ಮೆಮೋರಿಯಲ್ ಅಸೋಶೇಷಿಯನ್. ಬಳ್ಳಾರಿ, ಜಿ .ನಾಗನಗೌಡ ಬಯಲಾಟ ಕಲಾವಿದರು ಬಳ್ಳಾರಿ, ಪುರುಷೋತ್ತಮ ಹಂದ್ಯಾಳ್ ,ಡಿ. ಸುಬ್ಬಣ್ಣ ,ಎಂ ರಾಮಾಂಜನೇಯಲು, ಹೆಚ್ ವಿಷ್ಣುವರ್ಧನ್ ರೆಡ್ಡಿ, ವಿ.ರಾಮಚಂದ್ರ, ಕೆ.ಕೃಷ್ಣ, ಕೆ.ರಂಗಸ್ವಾಮಿ, ಅಡವಿಸ್ವಾಮಿ, ಇನ್ನೂ ಮುಂತಾದವರು ಉಪಸ್ಥಿತರಿದ್ದರು. ಜಡೇಶ ಎಮ್ಮಿಗನೂರು ಪ್ರಾರ್ಥಿಸಿದರು. ರಮಣಪ್ಪ ಭಜಂತ್ರಿ ವಂದಿಸಿದರು. ಟಿ.ನಾಗಭೂಷಣ್ ನಿರೂಪಿಸಿದರು.

## ಅನಾಮಧೇಯ ವ್ಯಕ್ತಿ ಮೃತ; ವಾರಸುದಾರರ ಪತ್ತೆಗೆ ಮನವಿ



ಬಳ್ಳಾರಿ: ನಗರದ ಎಪಿಎಂಸಿ ಮಾರುಕಟ್ಟೆಯಲ್ಲಿ ಆಡಳಿತ ಕಚೇರಿ ಮುಂಭಾಗದ ಸಾಯಿನಾಥ ಶೆಡ್-2 ಹತ್ತಿರ ಸುಮಾರು 30 ರಿಂದ 35 ವರ್ಷದ ಅನಾಮಧೇಯ ವ್ಯಕ್ತಿಯು ಮಾ.30ರಂದು ಮೃತ ಪಟ್ಟಿರುತ್ತಾನೆ. ಮೃತನ ವಾರಸುದಾರರ ಪತ್ತೆಗೆ ಸಹಕರಿಸಬೇಕು ಎಂದು ಎಪಿಎಂಸಿ ಯಾರ್ಡ್ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಅವರು ತಿಳಿಸಿದ್ದಾರೆ.

ಚಹರೆ ಗುರುತು: 5ರಿಂದ 6 ಅಡಿ ಎತ್ತರ, ಕೋಲುಮುಖ, ಕಪ್ಪು ಮೈಬಣ್ಣ, ಕುರುಚಲು ಗಡ್ಡ ಮತ್ತು ತಲೆಯಲ್ಲಿ ಕಪ್ಪು ಕೂದಲು, ಎಡ ಮೊಣಕೈಗೆ ತೆರಚಿರುತ್ತದೆ.ಮೃತನ ವಾರಸುದಾರರಿದ್ದಲ್ಲಿ ಎಪಿಎಂಸಿ ಯಾರ್ಡ್ ಪೊಲೀಸ್ ಠಾಣೆಯ ದೂ.08392-250033, ಮೊ.9480803096 ಅಥವಾ ಬಳ್ಳಾರಿ ಕಂಟ್ರೋಲ್ ರೂಂ.08392-258100 ಗೆ ಸಂಪರ್ಕಿಸಬಹುದಾಗಿದೆ.

## ಶ್ರೀರಾಮ ನವಮಿ ಪ್ರಯುಕ್ತ ಜಾನಪದ ಸಾಂಸ್ಕೃತಿಕ ಬೆಳಕು ಕಾರ್ಯಕ್ರಮ



ಬಳ್ಳಾರಿ: ಶ್ರೀ ಹುಲಿಕುಂಟೆರಾಯ ತೊಗಲುಗೊಂಬೆ ಕಲಾ ತಂಡ (ರಿ) ಬಳ್ಳಾರಿ ಇವರು ನಗರದ ಗುಗ್ಗರಹಟ್ಟಿ ಪ್ರದೇಶದ ಶ್ರೀ ಶ್ರೀಶೈಲ ಭ್ರಮರಾಂಭ ಮಲ್ಲಿಕಾರ್ಜುನ ಶಿವದೀಕ್ಷಾ ಮಂದಿರದಲ್ಲಿ ಶ್ರೀರಾಮ ನವಮಿ ಪ್ರಯುಕ್ತ ಜಾನಪದ ಸಾಂಸ್ಕೃತಿಕ ಬೆಳಕು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದ ಸಾನಿಧ್ಯವನ್ನು ಹರಗಿನಡೋಣಿ ಪಂಚವಟಗಿ ಮಠದ ಷ.ಬ್ರ. ಅಭಿನವ ಸಿದ್ಧಲಿಂಗ ಮಹಾಸ್ವಾಮಿಗಳು ವಹಿಸಿದ್ದರು.

ಕಾರ್ಯಕ್ರಮದ ಉದ್ಘಾಟನೆಯನ್ನು ಮಸೀದಿಪುರದ ಶಾಸ್ತ್ರಿ ಸಿದ್ದರಾಮಗೌಡ ಅವರು ನೆರವೇರಿಸಿ ಮಾತನಾಡುತ್ತಾ, ಇಂದಿನ ಜಗತ್ತಿನಲ್ಲಿ ಜಾನಪದ ಕಲೆಗಳನ್ನು ಉಳಿಸಿ, ಬೆಳೆಸಿಕೊಂಡು ಹೋಗುವ ಜವಾಬ್ದಾರಿ ಕಲಾವಿದರ ಮೇಲಿದೆ ಎಂದರು.

ಈಗಿನ ಸಂದರ್ಭದಲ್ಲಿ ಇಂತಹ ಜಾನಪದ ಕಲೆಗಳನ್ನು ಜನರಿಗೆ ಪರಿಚಯಿಸಿಕೊಡುತ್ತಿರುವುದು ತುಂಬಾ ಸಂತಸದ ವಿಷಯವಾಗಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಢಿದ, ಶಿವದೀಕ್ಷಾ ಮಂದಿರದ ಧರ್ಮಾಧಿಕಾರಿಗಳಾದ ಕೆ.ರಾಜಶೇಖರಗೌಢ ಅವರು, ಇಂದಿನ ಕಾರ್ಯಕ್ರಮವು ನೆರದ ಜನರ ಮನರಂಜಿಸುವ ಸಾಂಸ್ಕೃತಿಕ ಕಾರ್ಯಕ್ರಮಗಳಿವೆ.

ಇಂತಹ ಕಾರ್ಯಕ್ರಮಗಳನ್ನು ಇಲ್ಲಿ ಹಮ್ಮಿಕೊಂಡಿರುವುದು ತುಂಬಾ ಸಂತಸದ ವಿಷಯವಾಗಿದೆ ಎಂದರು. ಕಾರ್ಯಕ್ರಮದಲ್ಲಿ ಎಪಿಎಂಸಿ ತರಕಾರಿ ವ್ಯಾಪಾರಿ ಜಿ.ರವಿ ಕಾಕರ್ಲತೋಟ, ಸಂಗೀತ ಶಿಕ್ಷಕ ದೊಡ್ಡಬಸವ ಗವಾಯಿಗಳು, ಸಂಸ್ಥೆಯ ಸದಸ್ಯರಾದ ವೈ.ಪ್ರಭು ಉಪಸ್ಥಿರಿದ್ದರು.

ಈ ಸಂದರ್ಭದಲ್ಲಿ ತೊಗಲುಗೊಂಬೆ ಕಲೆಯ ಬಗ್ಗೆ ಕುರಿತು ವಿಚಾರ ಸಂಕಿರಣವನ್ನು ಸರಳಾದೇವಿ ಸತೀಶ್ಚಂದ್ರ ಅಗರವಾಲ್ ಪ್ರಥಮ ದರ್ಜೆ ಕಾಲೇಜಿನ ಪ್ರಾಧ್ಯಾಪಕರು ಹಾಗೂ ಲೇಖಕರಾದ ಡಾ. ದಸ್ತಗಿರಿಸಾಬ್ ದಿನ್ನಿ ರವರು ಮಂಡಿಸಿದರು.

ನಂತರ ಸೂರ್ಯಕಲಾ ಟ್ರಸ್ಟ್ ಇವರಿಂದ ಸಮೂಹ ನೃತ್ಯ, ಸಂತೋಷ್‌ಕುಮಾರ್ ಇವರಿಂದ ಸುಗಮ ಸಂಗೀತ, ರಾಜಾಭಕ್ಷಿ ಇವರಿಂದ ವಚನ ಗಾಯನ ನಡೆಯಿತು.ಈ ಸಂದರ್ಭದಲ್ಲಿ ಲೇಖಕ ಡಾ. ದಸ್ತಗಿರಿಸಾಬ್ ದಿನ್ನಿ, ನೃತ್ಯ ಶಿಕ್ಷಕ ಅಭಿಷೇಕ್ (ಕೆ.ಸಿ.ಸುಂಕಣ್ಣ), ತಬಲಾ ವಾದಕ ಡಿ.ವಿರುಪಾಕ್ಷಪ್ಪ ದೇವಲಾಪುರ ಇವರನ್ನು ಸನ್ಮಾನಿಸಿದರು. ಸಂಸ್ಥೆಯ ಸಂಚಾಲಕ ಕೆ.ಹೊನ್ನೂರಸ್ವಾಮಿ ಪ್ರಾಸ್ತಾವಿಕ ನುಡಿ ಮಾತನಾಡಿದರೆ, ಕಾರ್ಯಕ್ರಮ ನಿರೂಪಿಸಿದರೆ, ಕೊನೆಯಲ್ಲಿ ಶ್ರೀಮತಿ ಲಕ್ಷ್ಮಿದೇವಿ ಹೊನ್ನೂರಸ್ವಾಮಿ ವಂದಿಸಿದರು.

## ಸುಣಧೋಳಿ ಮಹಿಳಾ ಕ್ರೆಡಿಟ್ ಸೌಹಾರ್ದಗೆ 76.07 ಲಕ್ಷ ರೂ ಲಾಭ

ಮೂಡಲಗಿ: ಸುಣಧೋಳಿ ಮಹಿಳಾ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ 2023ರ ಮಾರ್ಚ ಅಂತ್ಯಕ್ಕೆ ರೂ76.07 ಲಕ್ಷ ಲಾಭವನ್ನು ಗಳಿಸಿ ಪ್ರಗತಿಯಲ್ಲಿ ಸಾಗುತ್ತಿದೆ ಎಂದು ಸಹಕಾರಿಯ ಅಧ್ಯಕ್ಷೆ ಭಾರತಿ ಸಹದೇವ ಕಮತಿ ತಿಳಿಸಿದ್ದರು.

ಅವರು ಶನಿವಾರದಂದು ತಾಲೂಕಿನ ಸುಣಧೋಳಿ ಗ್ರಾಮದ ಸಹಕಾರಿ ಸಂಘದಲ್ಲಿ ಸಹಕಾರಿಯ 2022-23 ನೇ ಸಾಲಿನ ಸಂಘದ ಪ್ರಗತಿಯ ಕುರಿತು ಮಾತನಾಡಿ, ಸದ್ಯ ಸಹಕಾರಿಯು ರೂ 40.60 ಲಕ್ಷ ಶೇರು ಬಂಡವಾಳ ರೂ 5.34 ಕೋಟಿ ನಿಧಿಗಳು ರೂ 36.24 ಕೋಟಿ ಠೇವುಗಳು ರೂ 10.12 ಕೋಟಿ ಗುಂತಾವಣೆಗಳು ರೂ 31.12 ಕೋಟಿ ಸಾಲಗಳು ಹಾಗೂ ರೂ 44.19 ಕೋಟಿ ದುಡಿಯುವ ಬಂಡವಾಳವನ್ನು ಹೊಂದಿದೆ. ಸಹಕಾರಿ ಸದ್ಯ ಏಳು ಶಾಖೆಗಳು ಹೊಂದಿದ್ದು, ಅತಿ ಶೀಘ್ರದಲ್ಲಿ ಎರಡು ಶಾಖೆಗಳನ್ನು ಆರಂಭಿಸುವ ಗುರಿಯನ್ನು ಹೊಂದಿದೆ ಎಂದರು.

ಉಪಾಧ್ಯಕ್ಷೆ ಶಾಂತಾ ಪ್ರಕಾಶ ಪತ್ತಾರ ಮತ್ತು ಮುಖ್ಯ ಕಾರ್ಯ ನಿರ್ವಾಹಕರಾದ ಚಿದಾನಂದ ಶಿರಗೂರ ಇವರು ಮಾತನಾಡಿ ಪ್ರಸಕ್ತ ವರ್ಷದಿಂದ ಸಹಕಾರಿಯ ಐ.ಎಫ್.ಎಸ್.ಸಿ ಕೋಡ್ ಸೇವೆ ಪ್ರಾರಂಭಿಸಲಾಗುವದು ಎಲ್ಲಾ ಸದಸ್ಯರು ಇದರ ಸದುಪಯೋಗ ಪಡೆದುಕೊಳ್ಳಬೇಕೆಂದು ತಿಳಿಸಿದರು

ಈ ಸಂದರ್ಭದಲ್ಲಿ ಸದಸ್ಯರಾದ ವಿಮಲಾ ಚಂ ಹೊಟ್ಟಿಹೊಳಿ, ಶಿವಲೀಲಾ ಶಿ ಮದಭಾವಿ, ಈರವ್ವಾ ಸಿ ಪಾಟೀಲ, ಮೀನಾಕ್ಷಿ ಶಿ ಹೊಟ್ಟಿಹೊಳಿ, ಸವಿತಾ ರ ಸಂಕಣ್ಣವರ, ಪ್ರಭಾವತಿ ರ ಹೊಟ್ಟಿಹೊಳಿ, ಸ್ವಪ್ನಾ ರಾ ವಾಲಿ, ಬಸವ್ವಾ ಹ ಪಾಶಿ, ಮತ್ತು ಶ್ಯಾಲವ್ವಾ ದು ಮಾದರ ಹಾಗು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ಲಂಚ ಕೇಳಿದ್ದಕ್ಕೆ ರಸ್ತೆಗೆ ಕಂತೆ ಕಂತೆ ನೋಟು ಎಸೆದು ವಿನೂತನ ಪ್ರತಿಭಟನೆ



ಮಹಾರಾಷ್ಟ: ಮಹಾರಾಷ್ಟ್ರದಲ್ಲಿ ವಿಚಿತ್ರ ಘಟನೆಯೊಂದು ನಡೆದಿದೆ. ಕೊಳವೆ ಕೊರೆಸಲು ಅನುಮತಿ ನೀಡಲು ಲಂಚ ಕೇಳಿದ್ದಕ್ಕೆ ಕೆರಳಿದ ವ್ಯಕ್ತಿಯೊಬ್ಬ ಪಂಚಾಯಿತಿ ಆಫೀಸ್ ಮುಂದೆ ಕಂತೆ ಕಂತೆ ನೋಟುಗಳನ್ನ ಹರಿದು ಹಾಕಿ ಪ್ರತಿಭಟಿಸಿದ್ದಾನೆ.

ಜಿಯೋರೈ ಪೈಗಾದ ಸರಪಂಚ್ ಮಂಗೇಶ್ ಸಾಬಳೆ ಎನ್ನುವವರು ಪಂಚಾಯತ್ ಸಮಿತಿ ಕಚೇರಿಯ ಮುಂದೆ 2 ಲಕ್ಷ ರೂ.ಗಳನ್ನ ವ್ಯರ್ಥ ಮಾಡುವ ಮೂಲಕ ಪ್ರತಿಭಟಿಸಿದರು. ಪಂಚಾಯತ್ ಸಮಿತಿಯು ಕೊಳವೆ ಬಾವಿ ಕೊರೆಸಲು ಅನುಮತಿ ನೀಡಲು ಮೊತ್ತದ 12% ಲಂಚವಾಗಿ ಕೇಳಿದೆ ಸರಪಂಚ್ ತಮ್ಮ ಆಕ್ರೋಶ ವ್ಯಕ್ತಪಡಿಸಿದರು.

ಜಿಯೋರೈ ಪೈಗಾ ಸರಪಂಚ್ ಮಂಗೇಶ್ ಸಬಾಲೆ ಪ್ರಕಾರ, ನೀರಾವರಿ ಬಾವಿಗಳು, ದನದ ಕೊಟ್ಟಿಗೆಗಳು ಮತ್ತು ಜಲಮಾರ್ಗಗಳಂತಹ ಕೆಲಸಗಳನ್ನ ಅನುಮೋದಿಸಲು ಕಚೇರಿ ನಿಗದಿತ ಶೇಕಡಾವಾರು ರೈತರನ್ನ ನಿಗದಿಪಡಿಸಿದೆ. ಚುನಾಯಿತ ಪ್ರತಿನಿಧಿಗಳು ಈ ವಿಷಯವನ್ನ ನಿರ್ಲಕ್ಷಿಸುತ್ತಿದ್ದಾರೆ, ಇದರಿಂದ ರೈತರಿಗೆ ತೊಂದರೆಯಾಗುತ್ತಿದೆ. ವೆಲ್ ಪ್ರಸ್ತಾಪಗಳನ್ನು ಅನುಮೋದಿಸಲು ಕಚೇರಿ ರೈತರಿಂದ ಶೇಕಡಾ 12ರಷ್ಟು ಕಮಿಷನ್ ಕೇಳುತ್ತಿದೆ ಎಂದು ಆರೋಪಿಸಿದರು.

ಅದ್ರಂತೆ, ಸರಪಂಚ್ ಸಬಾಲೆ ಹಣದಿಂದ ಮಾಡಿದ ಹಾರವನ್ನ ಧರಿಸಿ ಪಂಚಾಯತ್ ಸಮಿತಿಯ ಮುಂದೆ ಪ್ರತಿಭಟನೆ ನಡೆಸುವ ಮೂಲಕ ತಮ್ಮ ಆಕ್ರೋಶ ವ್ಯಕ್ತಪಡಿಸಿದರು. ಅಧಿಕಾರಿಗಳು ಮತ್ತು ನೌಕರರಿಗೆ ಅಗತ್ಯವಾದ ಹಣವನ್ನ ತಂದಿದ್ದೇನೆ ಎಂದು ಹೇಳಿ ನೋಟುಗಳನ್ನ ನೆಲದ ಮೇಲೆ ಹರದು ಎಸೆದ್ದಾನೆ. ಈ ಮೂಲಕ 2 ಲಕ್ಷ ರೂ.ಗಳ ಗಣನೀಯ ಮೊತ್ತವನ್ನ ವ್ಯರ್ಥ ಮಾಡಿದ್ದಾನೆ.

ಇನ್ನು ಪ್ರತಿಭಟನೆಯ ಸಮಯದಲ್ಲಿ, ಅಲ್ಲೇ ಇದ್ದ ಮಕ್ಕಳು ಕೊಂಚ ನೋಟುಗಳನ್ನ ಎತ್ತಿಕೊಂಡು ಓಡಿ ಹೋದ್ರೆ, ಕೆಲವು ನೋಟುಗಳು ನೆಲದ ಮೇಲೆ ಉಳಿದವು. ಈ ವಿಶಿಷ್ಟ ಪ್ರತಿಭಟನೆಯ ವೀಡಿಯೊ ಅಂದಿನಿಂದ ಸಾಮಾಜಿಕ ಮಾಧ್ಯಮದಲ್ಲಿ ವೈರಲ್ ಆಗಿದೆ.

## ವಿದ್ಯಾರ್ಥಿನಿಯನ್ನ ಅರೆನಗ್ನಗೊಳಿಸಿ ಪರೇಡ್ ಮಾಡಿಸಿದ ಶಿಕ್ಷಕಿ

ಉತ್ತರಪ್ರದೇಶ: ಶಿಕ್ಷಕಿಯೊಬ್ಬಳು ಹೋಮ್ವರ್ಕ್ ಪೂರ್ತಿಯಾಗಿ ಮಾಡದ ಕಾರಣ ವಿದ್ಯಾರ್ಥಿನಿಯರನ್ನ ಅರೆನಗ್ನಾವಸ್ಥೆಯಲ್ಲಿ ಪರೇಡ್ ಮಾಡಿಸಿದ ಘಟನೆ ಉತ್ತರಪ್ರದೇಶದ ಸೋನ್ಭದ್ರಾದಲ್ಲಿ ನಡೆದಿದೆ.

ಬಾಲಕಿಯರ ಜೂನಿಯರ್ ಹೈ ಸ್ಕೂಲ್ನಲ್ಲಿ ಶಿಕ್ಷಕಿ ಮೀನಾ ಸಿಂಗ್, ಹೋಮ್ ವರ್ಕ್ ಮಾಡದ ವಿದ್ಯಾರ್ಥಿನಿಯರ ಬಟ್ಟೆ ಕಳಚಿ ಅರೆ ನಗ್ನವಾಗಿ ಶಾಲೆಯ ಕಾಂಪೌಂಡ್ನಲ್ಲಿ 2 ಗಂಟೆಗಳ ಕಾಲ ಪರೇಡ್ ಮಾಡಿಸಿದ್ದಾಳೆ ಎಂದು ವರದಿಯಾಗಿದೆ. ಅಲ್ಲದೆ ಇದನ್ನು ಮೊಬೈಲ್ನಲ್ಲಿ ವಿಡಿಯೋ ಮಾಡಿದ್ದು, ಮುಂದೆ ಹೋಮ್ವರ್ಕ್ ಮಾಡದಿದ್ದರೆ ವೀಡಿಯೋವನ್ನು ಲೀಕ್ ಮಾಡುವುದಾಗಿ ಶಿಕ್ಷಕಿ ಹೆದರಿಸಿದ್ದಾಳೆ.

ಬಾಲಕಿಯರ ಪೋಷಕರಿಗೆ ವಿಷಯ ತಿಳಿದು ಜಿಲ್ಲಾ ಮ್ಯಾಜಿಸ್ಟ್ರೇಟ್ಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಮನವಿ ಮಾಡಿದ್ದಾರೆ. ಘಟನೆ ಬಹಿರಂಗವಾದ ನಂತರ ಜಿಲ್ಲಾ ಮ್ಯಾಜಿಸ್ಟ್ರೇಟ್, ಶಿಕ್ಷಕಿಂ-ಯನ್ನು ಅಮಾನತು ಮಾಡಿದ್ದು, ತನಿಖೆ ನಡೆಯುತ್ತಿದೆ ಎಂದು ತಿಳಿಸಿದ್ದಾರೆ.

## ವಿವಿಧ ರಾಜಕೀಯ ಪಕ್ಷಗಳ ಮುಖಂಡರುಗಳ ಸಮಕ್ಷಮದಲ್ಲಿ ಮೊದಲ ಹಂತದ ರ‍್ಯಾಂಡಮೈಜೇಷನ್


# ಹೆಚ್ಚುವರಿ ಶೇ.20ರಷ್ಟು ಮತಯಂತ್ರಗಳು ಮೀಸಲು: ಡಿಸಿ ಪವನ್‌ಕುಮಾರ್ ಮಾಲಪಾಟಿ

ಬಳ್ಳಾರಿ: ಸಾರ್ವತ್ರಿಕ ವಿಧಾನಸಭೆ ಚುನಾವಣೆಯನ್ನು ಪಾರದರ್ಶಕ ಮತ್ತು ವಿದ್ಯುನ್ಮಾನ ಮತಯಂತ್ರಗಳಲ್ಲಿ ಯಾವುದೇ ಲೋಪದೋಷಗಳಿಲ್ಲದಂತೆ ಚುನಾವಣೆ ನಡೆಸಲು ಮೊದಲನೇ ಹಂತದ ರ‍್ಯಾಂಡಮೈಜೇಷನ್‌ನ್ನು ರಾಜಕೀಯ ಪಕ್ಷಗಳ ಸಮಕ್ಷಮದಲ್ಲಿ ನಡೆಸಿದ್ದು ಶೇ.20ರಷ್ಟು ಬ್ಯಾಲೆಟ್ ಯುನಿಟ್, ಕಂಟ್ರೋಲ್ ಯುನಿಟ್ ಯಂತ್ರಗಳು ಮತ್ತು ಶೇ.30ರಷ್ಟು ವಿವಿಪ್ಯಾಟ್‌ಗಳನ್ನು ಹೆಚ್ಚುವರಿಯಾಗಿ ಮೀಸಲಿರಿಸಲಾಗಿದೆ ಎಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಪವನ್‌ಕುಮಾರ್ ಮಾಲಪಾಟಿ ಅವರು ಹೇಳಿದರು.

ಅವರು, ಶನಿವಾರ ನೂತನ ಜಿಲ್ಲಾಡಳಿತ ಕಚೇರಿಯ ಆವರಣದ ಪಕ್ಕದಲ್ಲಿರುವ ಚುನಾವಣಾ ಶಾಖೆ ಕಚೇರಿ ಸಭಾಂಗಣದಲ್ಲಿ ವಿವಿಧ ರಾಜಕೀಯ ಪಕ್ಷಗಳ ಮುಖಂಡರುಗಳ ಸಮಕ್ಷಮದಲ್ಲಿ ಹಮ್ಮಿಕೊಂಡಿದ್ದ ಮೊದಲನೇ ಹಂತದ ಮತಯಂತ್ರಗಳ ರ‍್ಯಾಂಡಮೈಜೇಷನ್ ಸಭೆಯಲ್ಲಿ ಮಾತನಾಡಿದರು.

ಬಳ್ಳಾರಿ ಜಿಲ್ಲೆಯಲ್ಲಿ 5 ವಿಧಾನಸಭಾ ಕ್ಷೇತ್ರಗಳಿದ್ದು, 1191 ಚುನಾವಣಾ ಮತಗಟ್ಟೆಗಳಿವೆ. ಮತಗಟ್ಟೆಗಳಿಗೆ ಅವಶ್ಯವಿರುವ 2445 (ಬ್ಯಾಲೆಟ್ ಯುನಿಟ್), 1716 (ಕಂಟ್ರೋಲ್ ಯುನಿಟ್) ಮತ್ತು 1857 (ವಿ.ವಿ.ಪ್ಯಾಟ್) ಗಳು ಸರಬರಾಜು ಆಗಿರುತ್ತವೆ. ಅವುಗಳನ್ನು ಚುನಾವಣಾ ಆಯೋಗದಿಂದ ನೇಮಿಸಲ್ಪಟ್ಟ ತಂತ್ರಜ್ಞರುಗಳಿಂದ ಮತ್ತು ರಾಜಕೀಯ ಪಕ್ಷಗಳ ಉಪಸ್ಥಿತಿಯಲ್ಲಿ ಈಗಾಗಲೇ ಪಥಮ ಹಂತದ ಪರಿಶೀಲನಾ ಕಾರ್ಯವನ್ನು ಮಾಡಲಾಗಿದೆ ಎಂದು ತಿಳಿಸಿದರು.

ಇದರಲ್ಲಿ 2441 (ಬ್ಯಾಲೆಟ್ ಯುನಿಟ್),



1712 (ಕಂಟೋಲ್ ಯುನಿಟ್) ಮತ್ತು 1855 (ವಿ.ವಿ.ಪ್ಯಾಟ್)ಗಳು ಚುನಾವಣೆಗೆ ಸಿದ್ಧಗೊಂಡಿರುತ್ತವೆ. 4 (ಬ್ಯಾಲೆಟ್ ಯುನಿಟ್), 2 (ಕಂಟ್ರೋಲ್ ಯುನಿಟ್) ಮತ್ತು 2 (ವಿ.ವಿ.ಪ್ಯಾಟ್)ಗಳಲ್ಲಿ ತಾಂತ್ರಿಕ ಸಮಸ್ಯೆ ಕಂಡುಬಂದ ಹಿನ್ನೆಲೆಯಲ್ಲಿ ಹಿಂದಿರುಗಿಸಲಾಗಿದೆ ಎಂದರು.

**ಮೊದಲ ಹಂತದ ರ‍್ಯಾಂಡಮೈಜೇಷನ್:** ಈಗಾಗಲೇ ಪ್ರಥಮ ಹಂತದ ಯಾದೃಚ್ಛಿಕರಣದಲ್ಲಿ ಶೇ.20 ರಷ್ಟು 1431 ಬ್ಯಾಲೆಟ್ ಯುನಿಟ್‌ಗಳಿವೆ. ಶೇ.20ರಷ್ಟು 1431 ಕಂಟ್ರೋಲ್ ಯುನಿಟ್‌ಗಳಿವೆ ಮತ್ತು ಶೇ.30ರಷ್ಟು 1550 ವಿವಿ ಪ್ಯಾಟ್‌ಗಳನ್ನು ಹೆಚ್ಚುವರಿಯಾಗಿ ಆಯಾ ಕ್ಷೇತ್ರಗಳಿಗೆ ತೆಗೆದಿಟ್ಟು ಒದಗಿಸಲಾಗುತ್ತದೆ. ಇವುಗಳನ್ನು ಮತದಾನದ ಸಂದರ್ಭದಲ್ಲಿ ಮತಯಂತ್ರಗಳಲ್ಲಿ ಲೋಪದೋಷಗಳು ಕಂಡುಬಂದಲ್ಲಿ ಇವುಗಳನ್ನು ಬಳಸಿಕೊಳ್ಳಲು ಹೆಚ್ಚುವರಿಯಾಗಿ ಮೀಸಲಿರಿಸಲಾಗಿದೆ ಎಂದರು.

ನಾಮಪತ್ರ ಸಲ್ಲಿಕೆಯಾದ ನಂತರ ಅಭ್ಯರ್ಥಿಗಳ ಸಮಕ್ಷಮದಲ್ಲಿ ಎರಡನೇ ಹಂತದ ಯಾದೃಚ್ಛೀಕರಣವು ನಡೆಯಲಿದೆ. ಆ ಹಂತದಲ್ಲಿ ಯಾವ ಮತಗಟ್ಟೆಗಳಿಗೆ ಯಾವ ಮಂತ್ರಗಳು ಎಂಬುದನ್ನು ಗುರುತಿಸಲಾಗುತ್ತದೆ. ನಂತರದಲ್ಲಿ ನಿಯೋಜಿಸಿದ ಜಿಪಿಎಸ್‌ಯುಳ್ಳ ವಾಹನದಲ್ಲಿ ಆಯಾ ವಿಧಾನಸಭಾ ಕ್ಷೇತ್ರದ ಮತಗಟ್ಟೆಗಳಿಗೆ ಪೊಲೀಸ್ ಸಿಬ್ಬಂದಿಯೊಂದಿಗೆ ಭದ್ರತಾ ಕೊಠಡಿಗೆ ಕಳುಹಿಸಿಕೊಡಲಾಗುವುದು. ಮತ್ತು ಯಾದೃಚ್ಛಿಕರಣಕ್ಕೆ ಮೀಸಲಿಟ್ಟ ಚುನಾವಣಾ ಯಂತ್ರಗಳನ್ನು ಮತದಾನದ ವೇಳೆ ಮಂತ್ರಗಳಲ್ಲಿ ಯಾವುದೇ ಲೋಪದೋಷಗಳು ಕಂಡುಬಂದರೆ ನಿಯೋಜಿಸಿದ ಆಯಾ ಸೆಕ್ಟರ್ ಅಧಿಕಾರಿಗಳಿಂದ ಬಳಸಿಕೊಳ್ಳಲಾಗುತ್ತದೆ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ವಿವಿಧ ಪಕ್ಷಗಳ ರಾಜಕೀಯ ಮುಖಂಡರುಗಳು ಮತ್ತು ಕ್ಷೇತ್ರ ಚುನಾವಣಾಧಿಕಾರಿಗಳು ಚುನಾವಣಾ ಶಾಖೆಯಲ್ಲಿ ಸಂಗ್ರಹಿಸಿಡಲಾದ ಈಗಾಗಲೇ ಮೊದಲ ಹಂತದಲ್ಲಿ ಪರಿಶೀಲಿಸಲಾದ ಮತಯಂತ್ರಗಳನ್ನು ವೀಕ್ಷಣೆ ಮಾಡಿದರು.

ಈ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿ ಮೊಹಮ್ಮದ್ ಝುಬೇರಾ ಹಾಗೂ ಜಿಲ್ಲೆಯ 5 ವಿಧಾನಸಭಾ ಕ್ಷೇತ್ರಗಳ ಚುನಾವಣಾಧಿಕಾರಿಗಳು ಮತ್ತಿತರರು ಉಪಸ್ಥಿತರಿದ್ದರು.

## ತೋಟಗಾರಿಕೆ ತರಬೇತಿಗಾಗಿ ಅರ್ಜಿ ಆಹ್ವಾನ

ಬೆಳಗಾವಿ: ತೋಟಗಾರಿಕೆ ಪ್ರಾಯೋಗಿಕ ತರಬೇತಿ ಯೋಜನೆಯಡಿಯಲ್ಲಿ 2023 24 ನೇ ಸಾಲಿನ ಬೆಳಗಾವಿ ಜಿಲ್ಲೆಯ ಅಭ್ಯರ್ಥಿಗಳಿಗೆ ಹುಕ್ಕೇರಿ ತಾಲ್ಲೂಕಿನ ಹಿಡಕಲ್ ಡ್ಯಾಂ ತೋಟಗಾರಿಕೆ ತರಬೇತಿ ಕೇಂದ್ರದಲ್ಲಿ ಮೆ. 2, 2023 ರಿಂದ ಫೆ. 29, 2024 ರ ವರೆಗೆ 10 ತಿಂಗಳ ತೋಟಗಾ–ರಿಕೆ ತರಬೇತಿಗಾಗಿ ಪುರುಷ 11 ಮಹಿಳಾ 5 ಅಭ್ಯರ್ಥಿಗಳಿಗೆ ಅರ್ಜಿ ಅಹ್ವಾನಿಸಲಾಗಿದೆ.

ಅಭ್ಯರ್ಥಿಯು ಎಸ್.ಎಸ್.ಎಲ್.ಸಿ ಪರಿಕ್ಷೇಯಲ್ಲಿ ಉತ್ತೀರ್ಣರಾಗಿರಬೇಕು, ತರಬೇತಿ ಬಯಸುವ ಅಭ್ಯರ್ಥಿಯ ತಂದೆ ತಾಯಿ ಪೋಷಕರು ಕಡ್ಡಾಯವಾಗಿ ಜಮೀನು ಹೊಂದಿರಬೇಕು ಹಾಗೂ ಸ್ವಂತ ಸಾಗುವಳಿ ಮಾಡುತ್ತಿರಬೇಕು ಈ ಬಗ್ಗೆ ಪಹಣಿಯನ್ನು (RTC) ನೀಡುವುದು ಕಡ್ಡಾಯವಾಗಿರುತ್ತದೆ. ಸಾಮಾನ್ಯ ವರ್ಗದ ಅಭ್ಯರ್ಥಿಗೆ ಕನಿಷ್ಠ ವಯೋಮಿತಿ 18 ವರ್ಷ ಹಾಗೂ ಗರಿಷ್ಠ 30 ವರ್ಷಗಳು, ಪರಿಶಿಷ್ಠ ಜಾತಿ ಹಾಗೂ ಪರಿಶಿಷ್ಠ ಪಂಗಡದ ಅಭ್ಯರ್ಥಿಗಳ ಕನಿಷ್ಠ ವಯೋಮಿತಿ 18 ವರ್ಷಗಳು ಹಾಗೂ ಗರಿಷ್ಠ 33 ವರ್ಷಗಳು.

ಅರ್ಜಿಗಳನ್ನು ತೋಟಗಾರಿಕೆ ಉಪನಿರ್ದೇಶಕರು (ಜಿ.ಪಂ) ಬೆಳಗಾವಿ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ರಾವ) ಬೆಳಗಾವಿ ರವರ ಕಛೇರಿಯಲ್ಲಿ ಅಥವಾ ಇಲಾಖೆಯ ವೆಬ್‌ಸೈಟ್ https://horticulturedir.karnataka.gov.in/ ನಲ್ಲಿ Download ಮಾಡಿಕೊಳ್ಳಬಹುದು. ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ ಏಪ್ರಿಲ್. 12, 2023 ರ ಸಂಜೆ 5 ಗಂಟೆಯ ವರೆಗೆ ನಿಗಧಿಪಸಲಾದೆ ಭರ್ತಿ ಮಾಡಿದ ಅರ್ಜಿಗಳನ್ನು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ರಾವ), ರಾಣಿ ಚನ್ನಮ್ಮ ವೃತ್ತ, ಬೆಳಗಾವಿ ಕಛೇರಿಗೆ ಸಲ್ಲಿಸಬೇಕು.

ಎಲ್ಲಾ ಅಭ್ಯರ್ಥಿಗಳು ಏಪ್ರಿಲ್ 15, 2023 ರಂದು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ರಾವ) ಬೆಳಗಾವಿ ರವರ ಕಛೇರಿಯಲ್ಲಿ ಬೆಳಿಗ್ಗೆ 11 ಗಂಟೆಗೆ ನೇರವಾಗಿ ಮೂಲ ದಾಖಲಾತಿಗಳೊಂದಿಗೆ ಸಂದರ್ಶನಕ್ಕೆ ಹಾಜರಾಗಬೇಕು. ಈ ಸಂಬಂಧವಾಗಿ ಕಛೇರಿಯಿಂದ ಯಾವುದೇ ಪತ್ರ ವ್ಯವಹಾರ ಮಾಡಲಾಗುವುದಿಲ್ಲ.

ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 0831–2451422 ಮತ್ತು ಹಿಡಕಲ್ ಡ್ಯಾಂ ತರಬೇತಿ ಕೇಂದ್ರದ ದೂರವಾಣಿ ಸಂಖ್ಯೆ 08333–263008 ಗೆ ಸಂಪರ್ಕಿಸಬಹುದ್ದು ಹಾಗೂ ಆಯಾ ತಾಲ್ಲೂಕಿನ ಹಿರಿಯ ಸಹಾಯಕ ತೋಟಗಾ–ರಿಕೆ ನಿರ್ದೇಶಕರು (ಜಿ.ಪಂ) ರವರ ಕಛೇರಿಯಲ್ಲಿ ವಿಚಾ–ರಿಸಬಹುದು ಎಂದು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಕರು ರಾವ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ವಿಧಾಸಭಾ ಚುನಾವಣೆ: ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಸಹಾಯವಾಣಿ ಕೇಂದ್ರ (24/7)

ಬೆಳಗಾವಿ: ಕರ್ನಾಟಕ ವಿಧಾನಸಭಾ ಸಾರ್ವತ್ರಿಕ ಚುನಾವಣೆ–2023 ರ ಕುರಿತು 13–ಬೆಳಗಾವಿ ಗ್ರಾಮೀಣ ವಿಧಾನ ಸಭಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಸಾರ್ವಜನಿಕರಿಗೆ ಯಾವದೇ ಚುನಾವಣಾ ಸಂಬಂಧಿತ ದೂರುಗಳಿಗೆ, ಹಾಗೂ ಇತರ ಸಹಾಯಕ್ಕಾಗಿ ಚುನಾವಣಾಧಿಕಾರಿಯವರ ಕಛೇರಿ ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಸಹಾಯವಾಣಿ ಕೇಂದ್ರ (24/7) ಸ್ಥಾಪಿಸಲಾಗಿದ್ದು ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಬಹುದು.

ಸಹಾಯವಾಣಿ ಕೇಂದ್ರದ (24/7) ದೂರವಾಣಿ ಸಂಖ್ಯೆಗಳು 0831–2002878 ಮೋಬೈಲ್ ಸಂಖ್ಯೆ 7899672183 ಗೆ ಸಂಪರ್ಕಿಸಬಹುದು ಎಂದು 13–ಬೆಳಗಾವಿ ಗ್ರಾಮೀಣ ಮತಕ್ಷೇತ್ರದ ಚುನಾವಣಾಧಿಕಾರಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಏ.5ರಂದು ಕಾಗವಾಡದಲ್ಲಿ ಸಹಾಯಕ ಚುನಾವಣಾ ಅಧಿಕಾರಿಗಳ ಕಛೇರಿ ಪ್ರಾರಂಭ

ಬೆಳಗಾವಿ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಹಾಗೂ ಮಹಾನಗರ ಪಾಲಿಕೆ ಇವರ ಸಂಯುಕ್ತಾಶ್ರಯದಲ್ಲಿ ಬುಧವಾರ (ಏ.05) ಡಾ. ಬಾಬು ಜಗಜೀವನ್ ರಾಮ್ ಉದ್ಯಾನವನ, ಸಂಗಮೇಶ್ವರ ನಗರದಲ್ಲಿ ಬೆಳಿಗ್ಗೆ 11 ಗಂಟೆಗೆ ಡಾ. ಬಾಬು ಜಗಜೀವನ್ ರಾಮ್ ಅವರ 116 ನೇ ಜನ್ಮದಿನಾಚರಣೆಯನ್ನು ಆಚರಿಸಲಾಗುವುದು.

ಕಾರ್ಯಕ್ರಮದ ಉದ್ಘಾಟಕರಾಗಿ ಪ್ರಾದೇಶಿಕ ಆಯುಕ್ತರಾದ ಡಾ. ಬಗಾದಿ ಗೌತಮ ಅವರು ಆಗಮಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಬೆಳಗಾವಿ ಉತ್ತರ ವಲಯ ಆರಕ್ಷಕ ಮಹಾನಿರೀಕ್ಷಕರಾದ ಎನ್ ಸತೀಶಕುಮಾರ ಅವರು ಆಗಮಿಸಲಿದ್ದಾರೆ. ಜಿಲ್ಲಾಧಿಕಾರಿಗಳಾದ ನಿತೀಶ್ ಕೆ. ಪಾಟೀಲ್ ಅವರು ಅಧ್ಯಕ್ಷತೆಯನ್ನು ವಹಿಸಲಿದ್ದಾರೆ.

ವಿಶೇಷ ಆಹ್ವಾನಿತರಾಗಿ ಡಾ. ಎಂ ಬಿ. ಬೋರ್ಲಿಂಗಯ್ಯ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಸಂಜೀವ ಎಂ. ಪಾಟೀಲ ,ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಹರ್ಷಲ್ ಭೋಯರ್ ಅವರು ಆಗಮಿಸಲಿದ್ದಾರೆ. ಹಾಗೂ ಉಪನ್ಯಾಸಕರಾಗಿ ಕೆ.ವಿ.ಜಿ. ಬ್ಯಾಂಕಿನ ನಿವೃತ್ತ ವ್ಯವಸ್ಥಾಪಕರಾದ ಬಸವರಾಜ ವಾಯ್. ಅರವಳ್ಳಿ ಅವರು ಉಪನ್ಯಾಸ ನೀಡಲಿದ್ದಾರೆ ಎಂದು ಮಹಾನಗರ ಪಾಲಿಕೆ ಆಯುಕ್ತರಾದ ರುದ್ರೇಶ ಘಾಳಿ ಅವರು ಪ್ರಕಣೆಯಲ್ಲಿ ತಿಳಿಸಿದ್ದಾರೆ.

## ಲಂಚ ಪಡೆಯುತ್ತಿದ್ದ ಕೆರೆ ಅಭಿವೃದ್ಧಿ ಪ್ರಾಧಿಕಾರದ ಅಧಿಕಾರಿ ಲೋಕಾಯುಕ್ತ ಬಲೆಗೆ




ಹಾವೇರಿ: 1.20 ಲಕ್ಷ ರೂ. ಲಂಚ ಪಡೆಯುತ್ತಿದ್ದ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದ ಅಧಿಕಾರಿ ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದಿದ್ದಾನೆ.

ತಾಂತ್ರಿಕ ತಜ್ಞ ಹಾಗೂ ಪ್ರಭಾರ ಜಿಲ್ಲಾ ಕಾರ್ಯನಿರ್ವಹಣಾಧಿಕಾರಿ ಶಿವಲಿಂಗಸ್ವಾಮಿ ಹಲಗಲಿಮಠ ಲೋಕಾಯುಕ್ತ ಬಲೆಗೆ ಬಿದ್ದ ಆರೋಪಿ. ಆರೋಪಿಯನ್ನು ಧಾರವಾಡ ಜಿಲ್ಲೆಯ ನವಲೂರಿನ ವಿನಾಯಕ ನಗರದ ನಿವಾಸದಲ್ಲಿ ಬಂಧಿಸಲಾಗಿದೆ.

ಕೆರೆ ಅಭಿವೃದ್ಧಿ ಕಾಮಗಾರಿಗಳ ಬಿಲ್ ಮಂಜೂರು ಮಾಡಲು ಆರೋಪಿ, ಸವಣೂರಿನ ಗುತ್ತಿಗೆದಾರ ಸುರೇಶ ಕಳಸೂರ ಎಂಬುವರಿಂದ ಲಂಚ ಪಡೆಯುತ್ತಿದ್ದ. ಈ ವೇಳೆ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿ ಆರೋಪಿಯನ್ನು ರೆಡ್ ಹ್ಯಾಂಡ್ ಆಗಿ ಹಿಡಿದಿದ್ದಾರೆ. ಗುತ್ತಿಗೆದಾರ ಸುರೇಶ ನಿರ್ವಹಿಸಿದ ಕೆರೆ ಅಭಿವೃದ್ಧಿ ಕಾಮಗಾರಿಗಳ ಬಿಲ್ ಮಂಜೂರು ಮಾಡಲು ಆರೋಪಿ 2.20 ಲಕ್ಷ ರೂ. ಲಂಚಕ್ಕೆ ಬೇಡಿಕೆ ಇಟ್ಟಿದ್ದ. ಮುಂಗಡವಾಗಿ 1 ಲಕ್ಷ ರೂ. ಹಣವನ್ನು ಪಡೆದುಕೊಂಡಿದ್ದ. ಗುತ್ತಿಗೆದಾರ ಸುರೇಶ ಕಳಸೂರು ನೀಡಿದ ದೂರಿನಿಂದ ಉಳಿದ 1.20 ಲಕ್ಷ ರೂ. ಹಣವನ್ನು ಪಡೆಯುತ್ತಿದ್ದ ವೇಳೆ ಲೋಕಾಯುಕ್ತರು ದಾಳಿ ನಡೆಸಿ ಆರೋಪಿಯನ್ನು ಬಂಧಿಸಿದ್ದಾರೆ.

# ಕಾಂಗ್ರೆಸ್ ಗೆಲುವಿಗೆ ಕಂಕಣ ಬದ್ಧರಾಗಿ ಶ್ರಮಿಸಿ: ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ ಜಾರಕಿಹೊಳಿ



ಮೈಸೂರು: ಕೇಂದ್ರ ಹಾಗೂ ರಾಜ್ಯದಲ್ಲಿ ಅಧಿಕಾರದಲ್ಲಿರುವ ಡಬಲ್ ಇಂಜಿನ್ ಸರ್ಕಾರದಿಂದ ಇಂದು ನಾವು ತಿನ್ನುವ ಆಹಾರದ ಮೇಲೆಯೂ ತೆರಿಗೆ ಕಟ್ಟುವ ಪರಿಸ್ಥಿತಿ ಬಂದಿದೆ.

ಈ ಹಿಂದೆ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಜನಪರ ಆಡಳಿತವನ್ನು ನಡೆಸುವ ಮೂಲಕ ಚುನಾವಣಾ ಪೂರ್ವದಲ್ಲಿ ನೀಡಿದ 65 ಭರವಸೆಗಳನ್ನು ಈಡೇ–ರಿಸಿದ ಏಕೈಕ ಪಕ್ಷ ಎಂದರೆ ಅದು ಕಾಂಗ್ರೆಸ್ ಪಕ್ಷವಾಗಿದೆ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ್ ಜಾರಕಿಹೊಳಿ ಹೇಳಿದರು.

ನಗರದಲ್ಲಿ ನಡೆದ ಮೈಸೂರು ನಗರ ಹಾಗೂ ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಸಮಿತಿ ಎಸ್ ಟಿ ಘಟಕದ ಚುನಾವಣಾ ಪೂರ್ವಭಾವಿ ಸಭೆಯಲ್ಲಿ ಭಾಗವಹಿಸಿ ಅವರು ಮಾತನಾಡಿ, ಕೈ ಪಕ್ಷ ಗೆಲ್ಲಬೇಕಾದರೆ ಕಾರ್ಯಕರ್ತರ ಪಾತ್ರ ಬಹುವಾಗಿದೆ. ಈ ನಿಟ್ಟಿನಲ್ಲಿ ಕಾರ್ಯಕರ್ತರೆಲ್ಲರೂ ಸೇರಿ ಪಕ್ಷದ ಗೆಲುವಿಗೆ ಕಂಕಣ ಬದ್ಧರಾಗಿ ಶ್ರಮಿಸಬೇಕೆಂದು ತಿಳಿಸಿದ ಅವರು, ಎಸ್ ಟಿ ಸಮುದಾಯದವರ ಸಮಸ್ಯೆ ಆಲಿಸಲು ಓರ್ವ ಮುಖಂಡರು ಇರಬೇಕು ಅಂ–ದಾಗ ಮಾತ್ರ ಸಮಸ್ಯೆ ಬಗೆಹ–ರಿಲು ಸಾಧ್ಯ. ಆದ್ದರಿಂದ ಎಸ್ ಟಿ ಸಮುದಾಯದವರು ಕ್ಷೇತ್ರ ಅಭಿವೃದ್ಧಿ ಹೊಂದಬೇಕಾದರೆ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯನ್ನು ಗೆಲ್ಲಿಸಲು ಮುಂದಾಗಬೇಕು ಎಂದು ತಿಳಿ ಹೇಳಿದರು.

ದೇಶದಲ್ಲಿ ವಿವಿಧ ಆಹಾರ ಪದಾರ್ಥಗಳ ಬೆಲೆ ಏರಿಕೆಯಾಗಲು ಅದಾನಿ ಅಂಬಾನಿಯಂತಹ ಕಾರ್ಪೋರೇಟ್ ಮಾಲೀಕರೇ ನೇರ ಕಾರಣರಾಗಿದ್ದಾರೆ.

ಕಾಂಗ್ರೆಸ್ ಸರ್ಕಾರ ಭಾಗ್ಯಜ್ಯೋತಿ, ರೈತರ ಸಾಲ ಮನ್ನಾ ಸೇರಿದಂತೆ ಅನೇಕ ಬಡವರ ಪರ ಯೋಜನೆಗಳನ್ನು ಜಾರಿ ಮಾಡಿದೆ. ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಮನೆಯ ಯಜಮಾನಿಗೆ ವರ್ಷಕ್ಕೆ 24.ಸಾವಿರ, ಪ್ರತಿ ಮನೆಗೆ 200 ಯುನಿಟ್ ವಿದ್ಯುತ್ ಹಾಗೂ ಪ್ರತಿ ವ್ಯಕ್ತಿಗೆ 10 ಕೆಜಿ ಉಚಿತ ಅಕ್ಕಿ ವಿತರಣೆ ಮಾಡಲು ಸಿದ್ದರಾಗಿದ್ದು, ಪಕ್ಷದ ಕಾರ್ಯಕರ್ತರು ಪ್ರತಿ ಮನೆಗೆ ತೆರಳಿ ನಮ್ಮ ಗ್ಯಾರಂಟಿ ಯೋಜನೆಗಳನ್ನು ತಲುಪಿಸುವ ಮೂಲಕ ಪಕ್ಷದ ಗೆಲುವಿಗೆ ಸನ್ನದ್ಧರಾಗುವಂತೆ ಕರೆ ನೀಡಿದರು.

ಸಭೆಯಲ್ಲಿ ಶಾಸಕರಾದ ಡಾ.ಯತೀಂದ್ರ ಸಿದ್ದರಾಮಯ್ಯ, ಅನೀಲ ಚಿಕ್ಕಮಾದರ, ಮಂಜುನಾಥ, ಡಾ. ತಿಮ್ಮಯ್ಯ, ಮೈಸೂರು ಜಿಲ್ಲಾ ಎಸ್ ಟಿ ಘಟಕದ ಜಿಲ್ಲಾಧ್ಯಕ್ಷ ವಿನಯಕುಮಾರ ಸೇ–ರಿದಂತೆ ಕಾಂಗ್ರೆಸ್ ಮುಖಂಡರು ಇದ್ದರು.

## ಚುನಾವಣಾ ಕರ್ತವ್ಯಕ್ಕೆ ಹಾಜರಾಗದ ಅಧಿಕಾರಿ, ಸಿಬ್ಬಂದಿಗಳ ವಿರುದ್ಧ ಪ್ರಜಾಪ್ರತಿನಿಧಿ ಕಾಯ್ದೆಯಡಿ ಶಿಸ್ತು ಕ್ರಮ; ಕರ್ತವ್ಯಕ್ಕೆ ಗೈರಾದ ಸಿಬ್ಬಂದಿಗೆ ಎಚ್ಚರಿಕೆ ನೀಡಿದ ಜಿಲ್ಲಾಧಿಕಾರಿ

ಧಾರವಾಡ: ವಿಧಾನಸಭಾ ಚುನಾವಣೆಯನ್ನು ಜಿಲ್ಲೆಯಲ್ಲಿ ಶಾಂತಿ, ಸುವ್ಯವಸ್ಥಿತವಾಗಿ, ಪಾರದರ್ಶಕ ಮತ್ತು ಸುಗಮವಾಗಿ ಜರುಗಿಸಲು ಅನುವು ಆಗುವಂತೆ ವಿವಿಧ ಇಲಾಖೆ, ಶಾಲೆ, ಕಾಲೇಜು, ಬ್ಯಾಂಕ್ ಸಿಬ್ಬಂದಿಗಳನ್ನು ಚುನಾವಣಾ ಕರ್ತವ್ಯಕ್ಕೆ ನೇಮಕಗೊಳಿಸಿ, ಈಗಾಗಲೇ ಆದೇಶಿ ಸಲಾಗಿದೆ.

ಆದರೆ ಕೆಲವರು ಇನ್ನೂ ಚುನಾವಣಾ ಕರ್ತವ್ಯಕ್ಕೆ ಹಾಜರಾಗಿಲ್ಲ. ಅಂತವರ ವಿರುದ್ಧ ಪ್ರಜಾಪ್ರತಿನಿಧಿ ಕಾಯ್ದೆ ಅನ್ವಯ ಶಿಸ್ತು ಕ್ರಮ ಜರುಗಿಸಿ, ತಕ್ಷಣ ಅಮಾನತ್ತು ಆದೇಶ ಹೊರಡಿಸಲಾಗುವುದು ಎಂದು ಜಿಲ್ಲಾ ಚುನಾವಣಾ ಅಧಿಕಾ–ರಿಗಳು ಆಗಿರುವ ಜಿಲ್ಲಾಧಿಕಾರಿ



ಗುರುದತ್ತ ಹೆಗಡೆ ಅವರು ಎಚ್ಚರಿಕೆ ನೀಡಿದ್ದಾರೆ.

ಈ ಕುರಿತು ಪ್ರಕಟಣೆ ನೀಡಿರುವ ಅವರು, ಕರ್ನಾಟಕ ವಿಧಾನಸಭೆ ಸಾರ್ವತ್ರಿಕ ಚುನಾವಣೆ ಘೋಷಣೆ ಆಗಿದ್ದು, ಮಾದರಿ ನೀತಿ ಸಂಹಿತೆ ಅನುಗಣ್ಣನದಲ್ಲಿದೆ.

ಈಗಾಗಲೇ ಜಿಲ್ಲೆಯ ವಿವಿಧ ಇಲಾಖೆ ಅಧಿಕಾರಿ, ಸಿಬ್ಬಂದಿಗಳನ್ನು ಚುನಾವಣಾ ಕರ್ತವ್ಯಕ್ಕೆ ನೇಮಿಸಿ, ಆದೇಶಿಸಲಾಗಿದೆ.

ಆದರೆ ಚೆಕ್‌ಪೋಸ್ಟ್ ಸೇರಿದಂತೆ ವಿವಿಧ ತಂಡಗಳಿಗೆ ನೇಮಕವಾದ ಕೆಲವು ಅಧಿಕಾರಿ, ಸಿಬ್ಬಂದಿಗಳು ತಮಗೆ ನೇಮಿಸಿದ ಕೆಲಸಕ್ಕೆ ಮತ್ತು ಸ್ಥಳಕ್ಕೆ ಇನ್ನೂ ಹಾಜರಾಗದಿರುವ ಕುರಿತು ಹಾಗೂ ಕೆಲವು ಅಧಿಕಾರಿಗಳು ತಮ್ಮ ಅಧೀನದ ಸಿಬ್ಬಂದಿಗಳನ್ನು ತಮ್ಮ ಕರ್ತವ್ಯಕ್ಕೆ ಕಳುಹಿಸುತ್ತಿರುವ ಕು–ರಿತು ಮಾಹಿತಿ ಬಂದಿದ್ದು, ಇಂತಹ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಿ, ಚುನಾವಣಾ ಕರ್ತವ್ಯ ಲೋಪವೆಂದು ಪರಿಗಣಿಸಲಾಗುವುದು ಎಂದು ಅವರು ಎಚ್ಚರಿಕೆ ನೀಡಿದ್ದಾರೆ.

ಜಿಲ್ಲೆಯ ಎಲ್ಲ ವಿಧಾನಸಭಾ ಮತಕ್ಷೇತ್ರಗಳ ಚುನಾವಣಾಧಿಕಾ–ರಿಗಳು ಇದನ್ನು ತುರ್ತು ಪರಿಶೀಲಿಸಿ, ಈಗಾಗಲೇ ಚುನಾವಣಾ ಕರ್ತವ್ಯಕ್ಕೆ ನೇಮಿಸಿರುವ ಎಲ್ಲ ಅಧಿಕಾರಿ ಮತ್ತು ಸಿಬ್ಬಂದಿಗಳು ತಮಗೆ ನೇಮಿಸಿದ ಸ್ಥಳದಲ್ಲಿ ಸಮಯಕ್ಕೆ ಸರಿಯಾಗಿ ಹಾಜರಿದ್ದು, ನಿಯಮಾನುಸಾರ ಕೆಲಸ ನಿರ್ವಹಿಸುತ್ತಿರುವ ಬಗ್ಗೆ ನಾಳೆ ಏ.2 ರ ಬೆಳಿಗ್ಗೆ ಜಿಲ್ಲಾ ಚುನಾವಣಾ ಅಧಿಕಾರಿಗಳ ಕಚೇರಿಗೆ ಕಡ್ಡಾಯವಾಗಿ ವರದಿ ಸಲ್ಲಿಸಬೇಕು. ಆದೇಶ ಉಲ್ಲಂಘಿಸಿ ಗೈರುಹಾಜರು ಉಳಿದಿರುವ, ಬದಲಿ ಸಿಬ್ಬಂದಿ ಕಳಿಸುವವರ ವಿವರ ಸಲ್ಲಿಸಬೇಕು. ತಕ್ಷಣ ತಪ್ಪಿತಸ್ಥರ ಮೇಲೆ ಭಾರತ ಚುನಾವಣಾ ಆಯೋಗ ಹಾಗೂ ಪ್ರಜಾಪ್ರತಿನಿಧಿ ಕಾಯ್ದೆ ಅನುಸಾರ ಕ್ರಮ ಜರುಗಿಸಲಾಗುವುದು ಎಂದು ಜಿಲ್ಲಾ ಚುನಾವಣಾ ಅಧಿಕಾರಿ ಗುರುದತ್ತ ಹೆಗಡೆ ಅವರು ಎಲ್ಲ ಚುನಾವಣಾಧೀಕಾರಿಗಳಿಗೆ ಆದೇಶಿಸಿ ದ್ದಾರೆ.

## ಸ್ಪಾರ್ಕ್ ಗನ್ ಹಿಡಿದು ಪೋಸ್ ಕೊಡುವಾಗ ವಧುವಿನ ಮುಖಕ್ಕೆ ತಾಗಿದ ಬೆಂಕಿ ಕಿಡಿ



ಮಹಾರಾಷ್ಟ್ರ: ಮದುವೆಯ ಸಂಭ್ರಮದಲ್ಲಿ ಕೇಕ್ ಕಟ್ ಮಾಡುವುದು, ಆ ವೇಳೆ ಪಟಾಕಿಯಂತೆ ಪಾಪ್‌ಅಪ್ ಹೊಡೆಯುವುದು ಸಾಮಾನ್ಯ. ಇಲ್ಲೊಂದು ಜೋಡಿ ಮದುವೆಯ ವೇದಿಕೆಯಲ್ಲಿ ಸಂಭ್ರಮಿಸಲು ಹೋಗಿ ಎಡವಟ್ಟು ಮಾಡಿಕೊಂಡಿರುವುದು ವೈರಲ್ ಆಗಿದೆ.

ವಧು ವರರು ಇಬ್ಬರು ಮದುವೆಯ ವೇದಿಕೆಯಲ್ಲಿ ಸಂತಸವಾಗಿ ನಿಂತುಕೊಂಡಿದ್ದಾರೆ. ಇಬ್ಬರ ಮುಂದೆ ಮದುವೆಯ ಕೇಕ್ ಕೂಡ ಇದೆ. ವಧು–ವರ ಗನ್ ಹಿಡಿದುಕೊಂಡಿದ್ದಾರೆ.

ಗನ್ ಒತ್ತಿದ್ದರೆ ಅದರಲ್ಲಿ ಸ್ಪಾರ್ಕ್ ಬರುತ್ತದೆ. ಸ್ಪಾರ್ಕ್ಲ ಗನ್ ಹಿಡಿದುಕೊಂಡು ಪೋಸ್ ನೀಡಿದ ಬಳಿಕ ಅದನ್ನು ಒತ್ತಿದ್ದಾರೆ. ನಗುಮುಖದಲ್ಲಿ ವಧುವಿಗೆ ಒಮ್ಮೆಗೆ ಶಾಕ್ ಆಗಿದೆ. ಕಾರಣ ಸ್ಪಾರ್ಕ್ ಗನ್ ನಿಂದ ಬೆಂಕಿ ಕಿಡಿ ಅಚಾನಕ್ಕಾಗಿ ಮುಖಕ್ಕೆ ಬಂದು ತಾಗಿದೆ. ಬೆಂಕಿಯ ಕಿಡಿ ಮುಖಕ್ಕೆ ಬಂದು ತಾಗಿದ ಕೂಡಲೇ ವಧು ಗನ್ ಬಿಸಾಕಿ ಹೆದರಿಕೊಂಡು ಬದಿಗೆ ಓಡಿದ್ದಾರೆ.

ಈ ದೃಶ್ಯ ಮೊಬೈಲ್ ನಲ್ಲಿ ಸೆರೆಯಾಗಿದ್ದು, ವಿಡಿಯೋ ಸೋಶಿಯಲ್ ಮೀಡಿಯಾದಲ್ಲಿ ವೈರಲ್ ಆಗಿದೆ. ಆದಿತಿ ಎನ್ನುವವರು ಈ ವಿಡಿಯೋ ಹಂಚಿಕೊಂಡಿದ್ದು, ಇದು ಮಹಾರಾಷ್ಟ್ರದಲ್ಲಿ ನಡೆದ ಮದುವೆ ಕಾರ್ಯಕ್ರಮದಾಗಿದೆ ಎಂದು ವರದಿ ತಿಳಿಸಿದೆ.

## ಗೂಡ್ಸ್ ಮತ್ತು ಟ್ರ್ಯಕ್ಟರ್ ಮಧ್ಯೆ ಅಪಘಾತ ಓರ್ವ ಸಾವು, 7 ಜನರಿಗೆ ಗಾಯ



ಅಥಣಿ: ಬೆಳಗಾವಿ ಜಿಲ್ಲೆಯ ಅಥ–'ಣಿ ತಾಲೂಕಿನ ಕೊಕಟನೂರ ಗ್ರಾಮದ ಹೊರವಲಯದಲ್ಲಿ ಗೂಡ್ಸ್ ವಾಹನ ಹಾಗೂ ಟ್ರಾಕ್ಟರ್ ನಡುವೆ ಅಪಘಾತ ಸಂಭವಿಸಿ ಗೂಡ್ಸ್ ಚಾಲಕ ಸ್ಥಳದಲ್ಲಿಯೇ ಸಾವನ್ನಪ್ಪಿದ ಘಟನೆ ನಡೆದಿದೆ.

ಮೃತ ವ್ಯಕ್ತಿ ಅಥಣಿ ಪಟ್ಟಣದ ಗುಡುಸಾಬ ಫೀರಸಾಬ್ ಪಟಾಯಿತ (45) ಎಂದು ತಿಳಿದುಬಂದಿದೆ. ಈ ಅಪಘಾತದಲ್ಲಿ ಗಾಯಗೊಂಡ ಏಳು ಜನರನ್ನು ಸ್ಥಳೀಯ ಕೊಕಟನೂರ ಹಾಗೂ ಅಥಣಿ ಸಮುದಾಯ ಆಸ್ಪತ್ರೆಯಲ್ಲಿ ದಾಖಲಿಸಲಾಗಿದೆ.

ಟ್ಯಾಕ್ಟರ್ ಮತ್ತು ಪಿಕ್ ಅಪ್ ವಾಹನ ಅಥಣಿ–ಸಾವಳಗಿ ರಸ್ತೆಯಲ್ಲಿ ಸಾಗಿ ಬರುತ್ತಿದ್ದಾಗ ಒಂದಕ್ಕೊಂದು ಡಿಕ್ಕಿ ಹೊಡೆದು ಈ ಅಪಘಾತ ಸಂಭವಿಸಿದೆ.

ಕೊಕಟನೂರ ಗ್ರಾಮದಲ್ಲಿ ನಡೆಯುವ ವಾರದ ಸಂತೆಗೆ ವ್ಯಾಪಾರಕ್ಕೆ ಹೋಗುವಾಗ ಈ ಘಟನೆ ಸಂಭವಿಸಿದ್ದು, ಐಗಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಕಾಗವಾಡ ತಾಲೂಕಿನಾದ್ಯಂತ ಮತದಾನ ಜಾಗೃತಿ ಅಭಿಯಾನ

ಬೆಳಗಾವಿ: ಕರ್ನಾಟಕ ವಿಧಾನಸಭೆ ಚುನಾವಣೆ ಹಿನ್ನೆಯಲ್ಲಿ ಕಾಗವಾಡ ತಾಲೂಕಿನಾದ್ಯಂತ ಶನಿವಾರ ತಾಲೂಕು ಸ್ವೀಪ ಸಮೀತಿ ವತಿಯಿಂದ ಮತದಾನ ಜಾಗೃತಿ ಅಭಿಯಾನ ಹಮ್ಮಿಕೊಳ್ಳಲಾಗಿತ್ತು.

ಕಾಗವಾಡ ತಾಲೂಕಿನ ಕುಸನಾಳ ಗ್ರಾಮದಲ್ಲಿ ಗ್ರಾಮಪಂಚಾಯತಿ ಸಿಬ್ಬಂದಿಗಳು ಮನೆಮನೆ ಭೇಟಿ ನೀಡಿ ಕರಪತ್ರಗಳ ಹಂಚಿಕೆ ಮಾಡುವುದರ ಜೊತೆಗೆ ಸ್ವಚ್ಛವಾಹಿನಿ ಜಿಂಗಲ್ಸ್ ಮೂಲಕ ಮತದಾನದ ಅರಿವು ಮೂಡಿಸಿದರು. ಕೃಷ್ಣಾ ಕಿತ್ತೂರು ಗ್ರಾಮದಲ್ಲಿ ಎನ್ ಆರ್ ಎಲ್ ಎಮ್ ಮಹಿಳಾ ಒಕ್ಕೂಟದ ವತಿಯಿಂದ ರಂಗೋಲಿ ಸ್ಪರ್ಧೆ ಆಯೋಜಿಸಲಾಗಿತ್ತು.

ಗ್ರಾಮದ ಯುವಕ ಯುವತಿಯರು ರಂಗೋಲಿ ಸ್ಪರ್ಧೆಯಲ್ಲಿ ಭಾಗವಹಿಸಿ ನನ್ನ




ಮತ ನನ್ನ ಹಕ್ಕು, ನನ್ನ ಮತ ಮಾರಾಟಕ್ಕಿಲ್ಲ, 18 ವರ್ಷ ಮೇಲ್ಪಟ್ಟವರು ಕಡ್ಡಾಯವಾಗಿ ಮತದಾನ ಮಾಡಿ, ಪ್ರತಿ ಮತವೂ ಅತ್ಯಮೂಲ್ಯ ತಪ್ಪದೇ ಮತದಾನ ಮಾಡಿ ಹೀಗೆ ಅನೇಕ ಘೋಷಣೆಗಳ ಜೊತೆಗೆ ಅಂ–ದವಾಗ ರಂಗೋಲಿ ಬಿಡಿಸಿದ್ದರು.

ಮಂಗಸೂಳಿ ಗ್ರಾಮದಲ್ಲಿ ಶಾಲಾ ಮಕ್ಕಳು ಜಾಗೃತಿ ಜಾಥಾ ನಡೆಸಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಜನರಿಗೆ ಅರಿವು ಮೂಡಿಸಿದರು.

ಗ್ರಾ.ಪಂ ಅಭಿವೃದ್ದಿ ಅಧಿಕಾ–ರಿಗಳಾದ ಪ್ರಶಾಂತ ಇನಾಮದಾರ, ಸಂಜೀವಸೂರ್ಯವಂಶಿ, ಶ್ರೀದೇವಿವಾಲಿ, ಹಾಗೂ ಅಂಗನವಾಡಿ ಆಶಾಕಾರ್ಯಕರ್ತರು, ಗ್ರಾಮಸ್ಥರು ಮುಂತಾದವರು ಅಭಿಯಾನದಲ್ಲಿ ಭಾಗವಹಿಸಿದ್ದರು.

## ಹುಕ್ಕೇರಿಯಲ್ಲಿ ಮತದಾನ ಜಾಗೃತಿ: ಬೈಕ್ ಜಾಥಾ



ಬೆಳಗಾವಿ: ಹುಕ್ಕೇರಿ ತಾಲ್ಲೂಕಿನ ತಾಲ್ಲೂಕು ಪಂಚಾಯತ ಆವರಣದಲ್ಲಿ ಮತದಾನ ಜಾಗೃತಿ ಜಾಥಾ ಕಾರ್ಯಕ್ರಮಕ್ಕೆ ತಾಲ್ಲೂಕು ಪಂಚಾಯತ ಕಾರ್ಯನಿರ್ವಾಹಕ ಅಧಿಕಾ–ರಿಗಳಾದ ವಿಲಾಸರಾಜ್ ಅವರು ಹಸಿರು ನಿಶಾನೆ ತೋರಿಸುವ ಮೂಲಕ ಚಾಲನೆ ನೀಡಿದರು.

ತಾಲ್ಲೂಕ ಪಂಚಾಯತಿ ವತಿಯಿಂದ ಬುಧವಾರ ಮಾರ್ಚ್ 29 ರಂದು ಆಯೋಜಿಸಿದ್ದ ಮತ ಜಾಗೃತಿ ಬೈಕ್ ಜಾಥಾ ಹುಕ್ಕೇರಿ ಪಟ್ಟಣ, ಬಸ್ತವಾಡ, ಗೌಡವಾಡ, ಬಡಕುಂದ್ರಿ ಮುಖಾಂತರ ಯಮಕನಮರಡಿ ಗ್ರಾಮಗಳ ವಿವಿಧ ಬೀದಿಗಳಲ್ಲಿ ಬೈಕ್ ಮುಖಾಂತ ಸಂಚರಿಸಿ ಮತದಾನದ ಕುರಿತು ಜಾಗೃತಿ ಮಾಡಲಾಯಿತು. ಜಾಗೃತಿಯನ್ನು ಜಿಂಗಲ್ಸ್ ಮತ್ತು ಸ್ಲೋಗನಗಳ ಮೂಲಕ ಪ್ರಚಾರ ಮಾಡಲಾಯಿತು.

ಎಲ್ಲ ಬೈಕ್ ಗಳಿಗೆ ಮತದಾನದ ಮಹತ್ವ ಸಾರುವ ಸ್ಟೀಕ್ಕರಗಳ ಅಂಟಿಸಿ ಜಾಗೃತಿ ಮೂಡಿಸಲಾಯಿತು.

ಈ ಸಂದರ್ಭದಲ್ಲಿ ತಾಪಂ ಕಾರ್ಯನಿರ್ವಾಹಕ ಅಧಿಕಾರಿಗಳಾದ ವಿಲಾಸರಾಜ್, ಸಹಾಯಕ ಕಾರ್ಯಕಾರಿ ಅಭಿಯಂತರರು ಪಂ.ರಾ.ಇಂ. ಉಪವಿಭಾಗ ಹುಕ್ಕೇರಿ, ಸಹಾಯಕ ನಿರ್ದೇಶಕರಾದ (ಉ.ಗ್ರಾ) ಲಕ್ಷ್ಮೀನಾರಯಣ ಪಿ, ಸಹಾಯಕ ನಿರ್ದೇಶಕರಾದ (ಪಂಚಾಯತ ರಾಜ್) ವೀರಾಂಜನೇಯ ಪ್ರಸಾದ, ಮಾನೇಜರ ನೀಲಕಂಠ ಕುಲಕರ್ಣಿ, ತಾಂತ್ರಿಕ ಸಂಯೋಜಕ ಅರ್ಷದ ನೇರ್ಲಿ, ತಾಲ್ಲೂಕಾ ಐಇಸಿ ಸಂಂ–ಯೋಜಕರಾದ ಮಹಾಂತೇಶ ಬಾದವನಮಠ, ಎಂ.ಐ.ಎಸ್. ಶಂಕರ ಶಿರಗುಪ್ಪಿ ಸೇರಿಂದತೆ ತಾಲ್ಲೂಕ ಪಂಚಾಯತ ಸಿಬ್ಬಂದಿಗಳು ವಿವಿಧ ಗ್ರಾಮಗಳ ಅಭಿವೃದ್ಧಿ ಅಧಿಕಾರಿಗಳು ಇದ್ದರು.

## 8 ವರ್ಷದ ಬಾಲಕನ ಅತ್ಯಾಚಾರ: ಕೊಲೆ




ಹುಬ್ಬಳ್ಳಿ: ಜಿಲ್ಲೆಯ ದೊಡ್ಡಮನಿ ಕಾಲೋನಿ ನಿರ್ಜನ ಪ್ರದೇಶದಲ್ಲಿ 8 ವರ್ಷದ ಅಪ್ರಾಪ್ತ ಬಾಲಕನೊಬ್ಬ ಶವವಾಗಿ ಪತ್ತೆಯಾಗಿದ್ದಾನೆ.

ಕಾಮುಕರು ಬಾಲಕನ ಮೇಲೆ ಅತ್ಯಾಚಾರವೆಸಗಿ ಕೊಲೆಗೈದಿರೋದು ಎಂದು ಶಂಕಿಸಲಾಗಿದೆ.

ವರದಿಗಳ ಪ್ರಕಾರ ಬಾಲಕನಿಗೆ ಶಾಲೆಗೆ ರಜೆ ಹಿನ್ನೆಲೆಯಲ್ಲಿ ಘಂಟಿಕೇರಿಯ ಅಜ್ಜಿ ಮನೆಗೆ ಬಂದಿದ್ದ.

ಈ ವೇಳೆ ಬಾಲಕ ಏಕಾಏಕಿ ನಾಪತ್ತೆಯಾಗಿದ್ದಾನೆ. ಸಂಜೆಯಾದರೂ ಬಾಲಕ ಮನೆಗೆ ಬಾರದ ಹಿನ್ನೆಲೆಯಲ್ಲಿ ಮನೆಯವರು ಹುಡುಕಾಟ ನಡೆಸಿದ್ದಾರೆ.

ಕೂಡಲೇ ಕುಟುಂಬಸ್ಥರು ಬೆಂಡಿಗೇರಿ ಪೊಲೀಸ್ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದಾರೆ. ಘಟನಾ ಸ್ಥಳಕ್ಕೆ ಬೆಂಡಿಗೇರಿ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

# ಚುನಾವಣಾ ನೀತಿ ಸಂಹಿತೆ’ ಕಟ್ಟುನಿಟ್ಟಾಗಿ ಪಾಲಿಸಿ : ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಲತಾ ಸೂಚನೆ

ಬೆಂಗಳೂರು ಗ್ರಾಮಾಂತರ ಜಿಲ್ಲೆ : ಕರ್ನಾಟಕ ವಿಧಾನಸಭಾ ಸಾರ್ವತ್ರಿಕ ಚುನಾವಣೆ–2023ರ ಹಿನ್ನೆಲೆಯಲ್ಲಿ ಜಿಲ್ಲಾದ್ಯಂತ ಕಟ್ಟುನಿಟ್ಟಿನ ನೀತಿ ಸಂಹಿತೆ ಜಾರಿಗೊಳಿಸಲಾಗಿದ್ದು, ಸುಗಮ ಹಾಗೂ ಸುಸೂತ್ರ ಚುನಾವಣಾ ಕಾರ್ಯ ನಿರ್ವಹಣೆಗೆ ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಆರ್.ಲತಾ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ದೇವನಹಳ್ಳಿ ತಾಲ್ಲೂಕಿನ ಬೀರಸಂದ್ರ ಗ್ರಾಮದ ಬೆಂಗಳೂರು ಗ್ರಾಮಾಂತರ ಜಿಲ್ಲಾಡಳಿತ ಭವನದಲ್ಲಿರುವ ಜಿಲ್ಲಾಧಿಕಾ–ರಿಯವರ ಕಚೇರಿ ಸಭಾಂಗಣದಲ್ಲಿಂದು ನಡೆದ ಕರ್ನಾಟಕ ವಿಧಾನಸಭಾ ಸಾರ್ವತ್ರಿಕ ಚುನಾವಣೆ–2023ರ ಸಂಬಂಧ ಮಾದರಿ ನೀತಿ ಸಂಹಿತೆ ಮತ್ತು ಇನ್ನಿತರೆ ಚುನಾವಣಾ ವಿಷಯಗಳ ಕುರಿತು ಜಿಲ್ಲಾ ಮಟ್ಟದ ಅಧಿಕಾರಿಗಳ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ರಾಜಕೀಯ ಪಕ್ಷಗಳು ಹಾಗೂ ಸರ್ಕಾರಿ ಜಾಹೀರಾತಿಗೆ ಸಂಬಂಧಿಸಿದ ಎಲ್ಲಾ ಗೋಡೆಬರಹ, ಪೋಸ್ಟರ್ಸ್, ಬ್ಯಾನರ್ಸ್, ಫ್ಲೆಕ್ಸ್ ಇತ್ಯಾದಿಗಳು ಸಂಪೂರ್ಣವಾಗಿ ತೆರವುಗೊಂಡಿರುವುದರ ಬಗ್ಗೆ ಅಧಿಕಾ–ರಿಗಳು ನಿಗಾವಹಿಸಬೇಕು. ಸರ್ಕಾರಿ ಪ್ರವಾಸಿ ಮಂದಿರ, ಪರಿವೀಕ್ಷಣಾ ಮಂದಿರಗಳನ್ನು ಈಗಾಗಲೇ ವಶಕ್ಕೆ ಪಡೆಯಲಾಗಿದ್ದು ವಿರೂಪಗೊಳಿಸಿದ್ದಲ್ಲಿ ನವೀಕರಣಕ್ಕೆ ಕ್ರಮ ಕೈಗೊಳ್ಳಲು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾದ್ಯಂತ ಇರುವ ಪ್ರತಿ ಮತಗಟ್ಟೆಯೂ ಮೂಲಭೂತ ಸೌಕರ್ಯಗಳನ್ನು ಒಳಗೊಂಡಿದ್ದು ಅಧಿಕಾರಿಗಳು ಭೌತಿ–ಕ ಪರಿಶೀಲನೆ ನಡೆಸಿ ಮತ್ತೊಮ್ಮೆ ಖಚಿತ ಪಡಿಸಿಕೊಳ್ಳಬೇಕು ಎಂದರು.ಮಾದರಿ ನೀತಿ ಸಂಹಿತೆ ಕಟ್ಟುನಿಟ್ಟಾಗಿ ಪಾಲಿಸುವ ಹಿನ್ನೆಲೆಯಲ್ಲಿ ಸಭೆ, ಸಮಾರಂಭ ಗಳಿಗೆ ಕಡ್ಡಾಯ ಅನುಮತಿ ಹಾಗೂ ವೆಚ್ಚ ನಿರ್ವಹಣೆಗಳ ಬಗ್ಗೆ ಅಧಿಕಾ–ರಿಗಳು ಮಾಹಿತಿ ಪಡೆಯಬೇಕು ಎಂದು ಸೂಚಿಸಿದರು.

ಜಿಲ್ಲೆಯ ನಾಲ್ಕು ತಾಲೂಕು ಕಚೇರಿಯಲ್ಲಿ 24/7 ನಿರ್ವಹಣಾ ಕೇಂದ್ರ ಸ್ಥಾಪಿಸಲಾಗಿದ್ದು, ಇವಿಎಂ ಗಳ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಕಾರ್ಯಕ್ರಮ ಹಾಗೂ ತರಬೇತಿ



ಕಾರ್ಯಕ್ರಮಗಳನ್ನು ಸ್ವೀಪ್ ಚಟುವಟಿ–ಕೆಗಳ ಮೂಲಕ ಆಯೋಜಿಸಬೇಕು, ಪಿಡಬ್ಲ್ಯೂಡಿ ಮತದಾರರನ್ನು ಮತ್ತು 80 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರನ್ನು ಗುರುತಿಸಿ, 12ಡಿ ನಮೂನೆ ನೀಡುವುದು. ಸದರಿಯವರಿಗೆ ಎಲ್ಲ ಸೌಲಭ್ಯಗಳನ್ನು ಒದಗಿಸಲು ಕ್ರಮ ಕೈಗೊಳ್ಳುವಂತೆ ಸಂಬಂಧಿಸಿದ ಇಲಾಖಾ ಅಧಿಕಾರಿಗಳಿಗೆ ನಿರ್ದೇಶಿಸಿದರು.

80ವರ್ಷ ಮೇಲ್ಪಟ್ಟ ಹಿರಿಯ ನಾಗ–ರಿಕರು ಆದಷ್ಟೂ ಮತಗಟ್ಟೆಗಳಿಗೇ ಬಂದು ಮತ ಚಲಾಯಿಸಲು ಅಧಿಕಾ–ರಿಗಳು ಮನವೊಲಿಸಬೇಕು ಎಂದರು. ಚುನಾವಣಾ ನಿರ್ವಹಣೆ, ಕಾನೂನು ಸುವ್ಯವಸ್ಥೆ, ಮಾದರಿ ನೀತಿ ಸಂಹಿತೆ, ಚುನಾವಣಾ ಕಾರ್ಯಗಳ ಸುಗಮ ನಿರ್ವಹಣೆಗೆ ಸಂಬಂಧಿಸಿದಂತೆಯೂ ಅವರು ಮಾತನಾಡಿದರು.

ಪೊಲೀಸ್ ಇಲಾಖೆ ಮತ್ತು ಅಬಕಾರಿ ಇಲಾಖೆ ನೇತೃತ್ವದಲ್ಲಿ ಚೆಕ್ಪೋಸ್ಟ್‌ಗಳಿಗೆ ಎಸ್‌ಎಸ್ಟಿ ತಂಡಗಳನ್ನು ಈಗಾಗಲೇ ನಿಯೋಜಿಸಲಾಗಿದೆ. ಮುಂದಿನ ದಿನಗಳಲ್ಲಿ ಅಧಿಕಾರಿಗಳು ಸಾಕಷ್ಟು ಜಾಗರೂಕರಾಗಿ ವಾಹನಗಳ ತಪಾಸಣೆ ಕಟ್ಟುನಿಟ್ಟಾಗಿ ನಡೆಸಲು ಸೂಚಿಸಿದರು.ಸೂಕ್ಷ್ಮ ಮತಗಟ್ಟೆ ಕೇಂದ್ರಗಳಲ್ಲಿ ಮುನ್ನೆಚ್ಚರಿಕಾ ಕ್ರಮವಾಗಿ ಹೆಚ್ಚು ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಗಳನ್ನು ನಿಯೋಜಿಸುವ ಮೂಲಕ ಸೂಕ್ತ ಬಿಗಿ ಬಂದೋಬಸ್ತ್ ವ್ಯವಸ್ಥೆ ಕಲ್ಪಿಸಲು ಕ್ರಮ ವಹಿಸಬೇಕೆಂದರು.

ಚುನಾವಣಾಧಿಕಾರಿ, ಸಹಾಯಕ ಚುನಾವಣಾಧಿಕಾರಿ, ಸೆಕ್ಟರ್ ಅಧಿಕಾ–ರಿಗಳು ಪರಸ್ಪರ ಸಮನ್ವಯ ಸಾಧಿಸಿ ಕೊಂಡು ಕಾರ್ಯ ನಿರ್ವಹಿಸಲು ಸೂಚಿಸಿದರು.ಸಭೆಯಲ್ಲಿ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ. ರವಿ.ಎಂ.ತಿರ್ಲಾಪುರ ಅವರು ಮಾತನಾಡಿ ಸ್ವೀಪ್ ಚಟುವಟಿಕೆಗಳ ಮುಖಾಂತರ ಹೆಚ್ಚು ಹೆಚ್ಚು ಮತದಾನ ಜಾಗೃತಿ ಅಭಿಯಾನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು ಎಂದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಅಮರೇಶ್.ಹೆಚ್, ಚುನಾವಣೆಗೆ ಸಂಬಂಧಿಸಿದಂತೆ ಜಿಲ್ಲಾ ಮಟ್ಟದ ತರಬೇತುದಾರ ಡಾ. ಅಮೀರ್ ಪಾಷಾ, ಜಿಲ್ಲಾ ಮಟ್ಟದ ಅಧಿಕಾರಿಗಳು, ನಾಲ್ಕು ತಾಲ್ಲೂಕುಗಳ ತಹಶೀಲ್ದಾರ್ಗಳು, ತಾಲ್ಲೂಕು ಕಾರ್ಯ ನಿರ್ವಹಣಾಧಿಕಾರಿಗಳು, ಸೆಕ್ಟರ್ ಅಧಿಕಾರಿಗಳು ಭಾಗವಹಿಸಿದ್ದರು.

# ಮತ ಎಣಿಕೆ ಕೇಂದ್ರ: ಸ್ಥಳ ಪರಿಶೀಲಿಸಿದ ಜಿಲ್ಲಾಧಿಕಾರಿ ನಿತೇಶ್ ಪಾಟೀಲ

## ■ ಸೂಕ್ತ ಸಿದ್ಧತೆ ಕೈಗೊಳ್ಳಲು ಅಧಿಕಾರಿಗಳಿಗೆ ಸೂಚನೆ

ಬೆಳಗಾವಿ: ವಿಧಾನಸಭೆ ಚುನಾವಣೆ ಹಿನ್ನೆಲೆಯಲ್ಲಿ ಮತ ಎಣಿಕೆ ಕೇಂದ್ರ ಸ್ಥಾಪನೆಗೆ ಸಂಬಂಧಿಸಿದಂತೆ ಜಿಲ್ಲಾ ಚುನಾವಣಾಧಿಕಾರಿಯೂ ಆಗಿರುವ ಜಿಲ್ಲಾಧಿಕಾರಿ ನಿತೇಶ್ ಪಾಟೀಲ ಅವರು ಸ್ಥಳ ಪರಿಶೀಲನೆ ನಡೆಸಿದರು.

ಹಿರಿಯ ಪೊಲೀಸ್ ಅಧಿಕಾರಿಗಳೊಂದಿಗೆ ನಗರದ ಆರ್‌ಪಿ.ಡಿ. ಕಾಲೇಜಿಗೆ ಶನಿವಾರ(ಏ.1) ಭೇಟಿ ನೀಡಿದ ಅವರು, ಸ್ಟ್ರಾಂಗ್ ರೂಮ್ ಮತ್ತು ಮತ ಎಣಿಕೆ ಕೇಂದ್ರ ಸ್ಥಾಪನೆ ಕುರಿತು ಅಧಿಕಾರಿಗಳ ಜತೆ ಚರ್ಚೆ ನಡೆಸಿದರು.

ಕಾಲೇಜಿನ ಆವರಣದಲ್ಲಿರುವ ವಿವಿಧ ಕಟ್ಟಡಗಳನ್ನು ಪರಿಶೀಲಿಸಿದ ಅವರು, ಕಳೆದ ಚುನಾವಣೆಯಲ್ಲಿ ಮಾಡಲಾಗಿದ್ದ ವ್ಯವಸ್ಥೆಗಳ ಬಗ್ಗೆ ಮಾಹಿತಿಯನ್ನು ಪಡೆದುಕೊಂಡರು.

ಈ ಬಾರಿಯೂ ಕೂಡ ಚುನಾವಣಾ ಆಯೋಗದ ಮಾರ್ಗಸೂಚಿ ಪ್ರಕಾರ ಸ್ಟ್ರಾಂಗ್ ರೂಮ್, ಮತ ಎಣಿಕೆ ಕೊಠಡಿ, ಪಾರ್ಕಿಂಗ್ ಮತ್ತಿತರ ಸೌಕರ್ಯಗಳನ್ನು ಒದಗಿಸಲು ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು



ಎಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಈ ಬಗ್ಗೆ ಸಮಗ್ರ ನೀಲನಕ್ಷೆ ರೂಪಿಸಿದ ಬಳಿಕ ಚುನಾವಣಾ ಆಯೋಗದ ಅ ನ ು ವ ೋ ದ ನ ಮೇರೆಗೆ ಕೆಲಸಗಳನ್ನು ಆರಂಭಿಸಬೇಕು ಎಂದು ಜಿಲ್ಲಾಧಿಕಾರಿ ನಿತೇಶ್ ಪಾಟೀಲ ತಿಳಿಸಿದರು.

ಅಗತ್ಯ ಭದ್ರತಾ ಕ್ರಮಗಳು ಮತ್ತು ಪಾರ್ಕಿಂಗ್ ವ್ಯವಸ್ಥೆ ಕುರಿತು ಪರಿಶೀಲಿಸಿದ ಬೆಳಗಾವಿ ನಗರ ಪೊಲೀಸ್ ಆಯುಕ್ತ ಡಾ.ಎಂ.ಬಿ.ಬೋರಲಿಂಗಯ್ಯ ಅವರು, ಸಂಬಂಧಿಸಿದ ಅಧಿಕಾರಿಗಳೊಂದಿಗೆ ಚರ್ಚಿಸಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು. ಭದ್ರತೆ ಮಾತ್ರವಲ್ಲದೇ ಸಂಚಾರಕ್ಕೆ ವ್ಯತ್ಯಯವಾಗದಂತೆ ಪಾರ್ಕಿಂಗ್ ಮತ್ತಿತರ ವ್ಯವಸ್ಥೆ ಕಲ್ಪಿಸುವ ಸಾಧ್ಯತೆಗಳ ಬಗ್ಗೆ ಚರ್ಚಿಸಿದರು. ಲೋಕೋಪಯೋಗಿ ಇಲಾಖೆಯ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಭೀಮಾ ನಾಯ್ಕ ಅವರು, ಸ್ಟ್ರಾಂಗ್ ರೂಮ್ ಮತ್ತು ಮತ ಎಣಿಕೆ ಕೇಂದ್ರ ಸ್ಥಾಪನೆಗೆ ಸಂಬಂಧಿಸಿದಂತೆ ಮಾಹಿತಿಯನ್ನು ನೀಡಿದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಸಂಜೀವ ಪಾಟೀಲ, ಉಪ ವಿಭಾಗಾಧಿಕಾರಿ ಬಲರಾಮ್ ಚವಾಣ, ಮಹಾನಗರ ಪಾಲಿಕೆಯ ಆಯುಕ್ತರಾದ ಡಾ.ರುದ್ರೇಶ್ ಘಾಳಿ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

# ಟ್ರೆಂಡ್ಸ್ ಮಳಿಗೆ ಸವದತ್ತಿಯಲ್ಲಿ ಆರಂಭ

ಬೆಳಗಾವಿ: ಉಡುಪು ಮತ್ತು ಪರಿಕರಗಳ ವಿಶೇಷ ಸರಣಿಯಾದ ರಿಲಯನ್ಸ್ ರಿಟೇಲ್ನ ಟ್ರೆಂಡ್ಸ್, ಬೆಳಗಾವಿ ಜಿಲ್ಲೆಯ ಸವದತ್ತಿ ಪಟ್ಟಣದಲ್ಲಿ ತನ್ನ ಹೊಸ ಮಳಿಗೆ ಆರಂಭಿಸಿದೆ.

ಟ್ರೆಂಡ್ಸ್ ಭಾರತದಲ್ಲಿ ತನ್ನ ವ್ಯಾಪ್ತಿಯನ್ನು ಮೆಟ್ರೊ ನಗರಗಳಿಂದ ಹಿಡಿದು ಮಿನಿ ಮೆಟ್ರೋಗಳು, 1ನೇ ಹಾಗೂ 2ನೇ ಶ್ರೇಣಿಯ ಪಟ್ಟಣಗಳು ಮತ್ತು ಅದರಾಚೆಗೆ ಬಲಪಡಿಸುವ ಮೂಲಕ ದೇಶದ ಗ್ರಾಹಕರೊಂದಿಗೆ ಸಂಪರ್ಕ ಸಾಧಿಸಿ ನೆಚ್ಚಿನ ಫ್ಯಾಷನ್ ತಾಣವಾಗಿದೆ.

ಸವದತ್ತಿಯ ಟ್ರೆಂಡ್ಸ್ ಮಳಿಗೆ, ಆಧುನಿಕ ನೋಟ ಮತ್ತು ವಾತಾವರಣ ಹೊಂದಿದ್ದು, ಈ ಪ್ರದೇಶದ ಗ್ರಾಹಕರಿಗೆ ಸಂಬಂಧಿಸಿದ ಮತ್ತು ಕೈಗೆಟುಕುವ ಬೆಲೆಯಲ್ಲಿ ದೊರಕುವ ಮತ್ತು ಹಣಕ್ಕೆ ಹೆಚ್ಚಿನ ಮೌಲ್ಯವನ್ನು ಒದಗಿಸುವ ಅತ್ಯಾಕರ್ಷಕ ಶ್ರೇಣಿಯ ಉತ್ತಮ ಗುಣಮಟ್ಟದ ಮತ್ತು ಫ್ಯಾಶನ್ ಸರಕುಗಳನ್ನು ಒಳಗೊಂಡಿದೆ.

ಈ ಪಟ್ಟಣದ ಗ್ರಾಹಕರು ಟ್ರೆಂಡಿ ವುಮೆನ್ಸ್ ವೇರ್, ಮೆನ್ಸ್ ವೇರ್, ಕಿಡ್ಸ್ ವೇರ್ ಮತ್ತು ಫ್ಯಾಶನ್ ಆಕ್ಸೆಸರಿಸ್, ಆಹ್ಲಾದಕರ ಬೆಲೆಯಲ್ಲಿ ಶಾಪಿಂಗ್ ಮಾಡುವ ವಿಶಿಷ್ಟವಾದ ವಿಶೇಷ ಮತ್ತು ಉತ್ಕೃಷ್ಟ ಅನುಭವವನ್ನು ಎದುರು ನೋಡಬಹುದು.

ಸವದತ್ತಿ ಪಟ್ಟಣದ ಮೊದಲ ಮಳಿಗೆಯಾಗಿರುವ ಈ 6885 ಚದರ ಅಡಿ ಮಳಿಗೆಯು ಉತ್ತಮ ಪ್ರಸ್ತುತವೆನಿಸುವ ಫ್ಯಾಷನ್ ಮತ್ತು ಅದ್ಭುತ ಬೆಲೆಗಳ ಜತೆಗೆ ತನ್ನ ಗ್ರಾಹಕರಿಗೆ ವಿಶೇಷವಾದ ಉದ್ಘಾಟನಾ ಕೊಡುಗೆಯನ್ನು ಹೊಂದಿದೆ. ರೂ. 3999 ಕ್ಕೆ ಶಾಪಿಂಗ್ ಮಾಡಿ ಮತ್ತು ರೂ. 249 ಕ್ಕೆ ಅತ್ಯಾಕರ್ಷಕ ಉಡುಗೊರೆಯನ್ನು ಪಡೆಯಬಹುದು. ಇದಲ್ಲದೇ ಗ್ರಾಹಕರು ರೂ.3999 ಖರೀದಿ ಮಾಡಿ ರೂ. 2000 ಮೌಲ್ಯದ ಕೂಪನ್ ಅನ್ನು ಸಂಪೂರ್ಣವಾಗಿ ಉಚಿತವಾಗಿ ಪಡೆಯಲಿದ್ದಾರೆ.

# ಸಂಶೋಧನಾತ್ಮಕ ಒಡಬಂಡಿಕೆಯ ಒಪ್ಪಂದ ವಿನಿಮಯ

ಬೆಳಗಾವಿ: ಕಾಹೇರ್‌ನ ಆಡಳಿತ ಮಂಡಳಿಯ ವಿಭಾಗದಲ್ಲಿ ಜರುಗಿದ ಕೆ.ಎಲ್.ಇ. ವಿಶ್ವವಿದ್ಯಾಲಯದ ಶ್ರೀ ಬಿ.ಎಂ. ಕಂಕಣವಾಡಿ ಆಯುರ್ವೇದ ಕಾಲೇಜು ಶಹಾಪೂರ ಬೆಳಗಾವಿ ಜೊತೆಗೆ ಆಳ್ವಾಸ್ ಆಯುರ್ವೇದ ಕಾಲೇಜಿನ "ಸಾಂಪ್ರದಾಯಿಕ ಔಷದಿ ದಾಖಲಾತಿ ಕೋಶ" (ATMA) ಮೂಡುಬಿದಿರೆ ದಕ್ಷಿಣಕನ್ನಡ ಇವರು ಸಂಶೋಧನಾತ್ಮಕ ಒಡಬಂಡಿಕೆಯ ಒಪ್ಪಂದ ವಿನಿಮಯವನ್ನು ಪರಸ್ಪರ ಹಸ್ತಾಂತರ ಮಾಡಿಕೊಂಡರು.

ಈ ಸಂಶೋಧನಾತ್ಮಕ ಒಡಂಬಡಿಕೆಯ ನಿಮಿತ್ತವಾಗಿ ಪರಸ್ಪರರು ಶೈಕ್ಷಣಿಕ/ಸಂಶೋಧನಾತ್ಮಕ/ ಬೋಧಕ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳ ವಿನಿಮಯ ಕಾರ್ಯಕ್ರಮಗಳು ಜರುಗಲಿವೆ ಹಾಗೂ ಮುಂಬರುವ ದಿನಗಳಲ್ಲಿ ಸಂಸ್ಥೆಗಳ ನಡುವೆ



ಬಾಹ್ಯ ಹಾಗೂ ಆಂತರಿಕ ಸಂಶೋಧನಾ ಕಾರ್ಯಗಳು, ಆಯುರ್ವೇದ ವೈದ್ಯಕೀಯ ಶೈಕ್ಷಣಿಕಅಧ್ಯಯನ,

ಪಂಚಕರ್ಮ ಔಷಧಿಗಳ ವಿನ್ಯಾಸ ಮತ್ತು ಬೆಳವಣಿಗೆ, ಬೋಧಕ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳ ವಿನಿಮಯ ಕಾರ್ಯಕ್ರಮಗಳು, ವಿಶೇಷ ಕೌಶಲ್ಯತೆಯಲ್ಲಿ ಪರಸ್ಪರ ಲಾಭದಾಯಕತೆ ಇನ್ನೂ ಮುಂತಾದ ಅಂಶಗಳಲ್ಲಿ ಅಭಿವೃದ್ಧಿಯನ್ನು ಕಾಣಬಹುದಾಗಿದೆ.

ಕಾಹೇರ್‌ನ ಕುಲಪತಿಡಾ.ಸಿತಿನ್ ಗಂಗಾನೆಯವರ ಉಪಸ್ಥಿತಿಯಲ್ಲಿ ಹಾಗೂ ಕುಲಸಚಿವರಾದ ಡಾ॥ವ್ಹಿ.ಎ.ಕೋಠಿವಾಲೆ, ಡಾ॥ವಿನಯ ಆಳ್ವಾ ವ್ಯವಸ್ಥಾಪಕ ನಿರ್ದೇಶಕರು, ಆಳ್ವಾಸ್ ಆರೋಗ್ಯಕೇಂದ್ರ ಮೂಡುಬಿದಿರೆ ದಕ್ಷಿಣಕನ್ನಡ ಜೊತೆಗೆ ಸಂಶೋಧನಾತ್ಮಕ ಒಡಂಬಡಿಕೆ ಒಪ್ಪಂದ ವಿನಿಮಯಕ್ಕೆ ಸಹಿಹಾಕಿದರು.

ಈ ಸಂದರ್ಭದಲ್ಲಿ ಆಯುರ್ವೇದ ಕಾಲೇಜಿನ ಪ್ರಾಂಶುಪಾಲರಾದ ಡಾ॥ಸುಹಾಸ್‌ಕುಮಾರ್ ಶೆಟ್ಟಿ, ಡಾ॥ ಪಿ.ಜಿ.ಜಾಡರಡೀನ್/ಉಪಪ್ರಾಂಶುಪಾಲರು ಹಾಗೂ ಡಾ॥ಫರ್ಹಾನ್‌ಜಮೀರ ಮುಖ್ಯ ವೈಜ್ಞಾನಿಕಅಧಿಕಾರಿ, (ATMA) ಮೂಡುಬಿದಿರೆ, ಡಾ॥ ಗಿರಿಧರ ವೇದಾಂತಮ್ ಮುಖ್ಯಸ್ಥರು ಅಖಿಈ ಸಂಶೋಧನಾ ವಿಭಾಗ ಮುಂತಾದವರು ಉಪಸ್ಥಿತರಿದ್ದರು.

ಡಾ॥ನೀತಿನಗಂಗಾನೆ, ಗೌರವಾನ್ವಿತ ಕುಲಪತಿಗಳು, ಕಾಹೇರ್ ಬೆಳಗಾವಿತಮ್ಮ ಪತ್ರಿಕಾ ಹೇಳಿಕೆಯಲ್ಲಿ, ಈ ಎರಡು ಸಂಸ್ಥೆಗಳು ಪರಸ್ಪರ ವಿಶ್ವಾಸ, ನಂಬಿಕೆ, ಸಹಕಾರ ಹಾಗೂ ಸಂಶೋಧನಾತ್ಮಕ ಪ್ರವೃತ್ತಿಗಳಿಂದ ಪರಸ್ಪರ ಉದ್ದೇಶಗಳನ್ನು ಗೌರವಿಸಿ ಬೆಳೆಸಬೇಕೆಂದು ಹೇಳಿದರು.

## ಪೂಜ್ಯ ಡಾ.ಶಿವಕುಮಾರ ಮಹಾಸ್ವಾಮಿಗಳ 116ನೇ ಜಯಂತೋತ್ಸವ

# ತುಮಕೂರು ಸಿದ್ಧಗಂಗೆಮಠದಲ್ಲಿ ಡಾ.ಪ್ರಭಾಕರಕೋರೆ ದಂಪತಿಗಳಿಗೆ ಸತ್ಕಾರ

ಬೆಳಗಾವಿ: ಅಖಂಡವಾಗಿ ಒಂದು ಪೀಠದ ಅಧಿಪತಿಯಾಗಿ ಒಂದಿನಿತೂಚ್ಯುತಿ ಬಾರದ ಹಾಗೆ ನಡೆದು ಜನಸಾಮಾನ್ಯರ ಹೃದಯ ಸಿಂಹಾಸನಗಳಲ್ಲಿ ಶಾಶ್ವತವಾಗಿ ನೆಲೆಸಿದವರು ಪೂಜ್ಯ ಡಾ.ಶಿವಕುಮಾರ ಮಹಾಸ್ವಾಮಿಗಳು. ಶ್ರೀಗಳು ಬದುಕಿರುವಾಗಲೇ ದಂತಕಥೆಯಾಗಿ ಜನಸೇವೆ ಮಾಡಿದರು ಎಂದು ಕೆ-ಎಲ್‌ಇ ಸಂಸ್ಥೆಯ ಕಾರ್ಯಾಧ್ಯಕ್ಷ ಡಾ.ಪ್ರಭಾಕರಕೋರೆಯವರು ಅವರು ಹೇಳಿದರು. ಅವರು ತುಮಕೂ-ರಿನ ಸಿದ್ಧಗಂಗಾ ಮಠದಲ್ಲಿ ಜರುಗಿದಶ್ರೀ ಶ್ರೀ ಶಿವಕುಮಾರ ಮಹಾಸ್ವಾಮೀ-ಜಿಯವರ 116 ನೇ ಜನ್ಮ ದಿನೋತ್ಸವ ಹಾಗು ಗುರುವಂದನಾ ಸಮಾರಂಭದಲ್ಲಿ ಸತ್ಕಾರವನ್ನು ಸ್ವೀಕರಿಸಿ ಮಾತನಾಡಿದರು.

ಪೂಜ್ಯ ಶಿವಕುಮಾರ ಮಹಾಸ್ವಾಮೀ-ಜಿಯವರು ದೀನದಲಿತರ, ಹಳ್ಳಿಗಾಡಿನ ಜನರ ಬದುಕನ್ನು ಸುಧಾರಿಸಿದ್ದಾರೆ. ಲಕ್ಷಾಂತರ ಮಕ್ಕಳಿಗೆ ವಿದ್ಯಾದಾನ



ನೀಡಿದ್ದಾರೆ. ಸಿದ್ಧಗಂಗೆಯಲ್ಲಿ ಮೌನ ಸಾಮಾಜಿಕ ಕ್ರಾಂತಿಯೇ ನಡೆದು ಹೋಗಿದೆ.

ನೂರೊಂದು ಸ್ವಾಮಿಗಳನ್ನು ಸಂತರನ್ನು, ಪೀಠಾಧಿಪತಿಗಳನ್ನು ಕಂಡಿದ್ದೇನೆ. ಅಥ-ಣಿಯ ಶಿವಯೋಗಿಗಳು, ಧಾರವಾಡದ ಮೃತ್ಯುಂಜಯ ಅಪ್ಪಗಳು, ಮುರಗೋಡದ ಮಹಾಂತ ಅಪ್ಪಗಳು, ಬೆಳಗಾವಿಯ ನಾಗನೂರು ರುದ್ರಾಕ್ಷಿ ಮಠದ ಡಾ.ಶ್ರೀ ಶಿವಬಸವ ಮಹಾಸ್ವಾಮಿಗಳು ಹೀಗೆ ಈ ಪೂಜ್ಯರುದಾಸೋಹಕ್ಕೆ ಸಾಕ್ಷಿಯಾಗಿದ್ದರು. ಇಂಥ ಸ್ವಾಮಿಗಳ ಕುಲಕ್ಕೆ ಆದ-ರ್ಶಪ್ರಾಯರಾಗಿ ನೂರಕ್ಕೂ ಅಧಿಕ ವರ್ಷಗಳ ಕಾಲ ಕರ್ನಾಟಕವನ್ನು ಕನ್ನಡಿಗರನ್ನು ಹೆಮ್ಮೆಯಿಂದ ಬೀಗುವಂತೆ, ಗೌರವದಿಂದ ಬಾಗುವಂತೆ ಮಾಡಿದ ಪುಣ್ಯ ಪುರುಷ ಡಾ ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮೀಜಿ.

ನನ್ನನ್ನು ಶ್ರೀಮಠಕ್ಕೆ ಕರೆದುಗೌರವ ಸತ್ಕಾರವನ್ನು ನೀಡಿರುವುದು, ಪೂಜ್ಯಡಾ.ಶಿವಕುಮಾರ ಮಹಾ ಸ್ವಾಮೀ-ಜಿಯವರ ದಿವ್ಯ ಸನ್ನಿಧಿಯಲ್ಲಿ ನನ್ನನ್ನು ಆಶೀರ್ವದಿಸಿರುವುದು ಸೌಭಾಗ್ಯವೆಂದು ಕೊಂಡಿದ್ದೇನೆ. ಇದೆಲ್ಲವೂ ನನ್ನ ಸುದೀರ್ಘ 50 ವರ್ಷಗಳ ಸೇವೆಯಲ್ಲಿ ಅಲ್ಪವಾದ ಸಾಮಾಜಿಕ ಹಾಗೂ ಧಾರ್ಮಿಕ ಸೇವೆಯ ಫಲವೆಂದು ಕೊಂಡಿದ್ದೇನೆ. ಭಗವಂತನು ಕೆಲವು ಕಾರ್ಯಗಳನ್ನು ನನ್ನಿಂದ ನೆರವೇ-ರಿಸಲು ಆಶೀರ್ವದಿಸಿದ್ದಾನೆ. ಅದರ ಶ್ರೇಯಸ್ಸು ಭಗವಂತನಿಗೆ ಹಾಗೂ ಕೆ-ಎಲ್‌ಇ ಸಂಸ್ಥೆಯ ಸಂಸ್ಥಾಪಕ ಚೇತನಕ್ಕೆ ಸಲ್ಲಬೇಕೆಂಬುದು ನನ್ನ ಬಯಕೆಎಂದು ಹೇಳಿದರು.

ಸಮಾರಂಭದ ದಿವ್ಯ ಸಾನ್ನಿಧ್ಯವನ್ನು ಸುತ್ತೂರು ಮಠದ ಪರಮ ಪೂಜ್ಯಜಗದ್ಗುರು ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿ, ಸಿದ್ಧಗಂಗೆಯ ಪೂಜ್ಯ ಸಿದ್ಧಲಿಂಗ ಮಹಾಸ್ವಾಮೀಜಿ, ಪೂಜ್ಯಗುರುಪರ ದೇಶಿಕೇಂದ್ರ ಮಹಾಸ್ವಾಮೀಜಿ ವಹಿಸಿದ್ದರು. ಇದೇ ಸಂದರ್ಭದಲ್ಲಿ ಡಾ.ಪ್ರಭಾಕರಕೋರೆಯವರಿಗೆ ಹಾಗೂ ಆಶಾ ಕೋರೆಯವರಿಗೆ ಪೂಜ್ಯರು ಸತ್ಕರಿಸಿ ಆಶೀರ್ವದಿಸಿದರು. ವಿಧಾನ ಪರಿಷತ್ ಮಾಜಿ ಸದಸ್ಯರಾದ ಮಹಾಂತೇಶ ಕವಟಗಿಮಠ, ಗಡಿಪ್ರಾಧಿಕಾರದ ಅಧ್ಯಕ್ಷರಾದ ಡಾ.ಸಿ.ಸೋಮಶೇಖರ ಮೊದಲಾದ ಗಣ್ಯರು ಉಪಸ್ಥಿತರಿದ್ದರು.

# ಕಿತ್ತೂರಿನಲ್ಲಿ ಮತದಾನ ಜಾಗೃತಿ ಬೈಕ್ ರ್‍ಯಾಲಿ




ಬೆಳಗಾವಿ: ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಜಿಲ್ಲಾ ಸ್ವೀಪ್ ಸಮಿತಿ, ತಾಲ್ಲೂಕು ಪಂಚಾಯಿತಿ ಹಾಗೂ ತಾಲೂಕು ಸ್ವೀಪ್ ಸಮಿತಿ ಸಹಯೋಗದಲ್ಲಿ ಮತದಾರರಿಗೆ ಮತದಾನದ ಬಗ್ಗೆ ಅರಿವು ಮೂಡಿಸುವ ಸಲುವಾಗಿ ಶನಿವಾರದಂದು ಕಿತ್ತೂರು ಪಟ್ಟಣ ಸೇರಿದಂತೆ ತಾಲೂಕಿನ ವಿವಿಧ ಗ್ರಾಮಗಳಲ್ಲಿ ಬೈಕ್ ರ್‍ಯಾಲಿ ಹಮ್ಮಿಕೊಳ್ಳಲಾಗಿತ್ತು.

ಕಿತ್ತೂರು ಪಟ್ಟಣದ ಚನ್ನಮ್ಮ ವೃತ್ತದಲ್ಲಿ ಬೈಕ್ ರ್‍ಯಾಲಿಗೆ ಕಿತ್ತೂರು ಮತ ಕ್ಷೇತ್ರದ ಚುನಾವಣಾಧಿಕಾರಿ ರೇಷ್ಮಾ ಹಾನಗಲ್ ಹಾಗೂ ತಾಲೂಕು ಸ್ವೀಪ ಸಮಿತಿ ಅಧ್ಯಕ್ಷ, ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಸುಭಾಷ ಸಂಪಗಾವಿ ಅವರು ಹಸಿರು ನಿಶಾನೆ ತೋರುವ ಮೂಲಕ ಚಾಲನೆ ನೀಡಿದರು.

ಬಳಿಕ ಮಾತನಾಡಿದ, ಚುನಾವಣಾ ಅಧಿಕಾರಿ ರೇಷ್ಮಾ ಹಾನಗಲ್ ಅವರು ಮಾತನಾಡಿ, ಮತದಾನದ ಶೇಕಡಾವಾರು ಪ್ರಮಾಣ ಹೆಚ್ಚಾಗಬೇಕಿದ್ದು, ಯಾವುದೇ ಆಸೆ ಆಮಿಷಗಳಿಗೆ ಒಳಗಾಗದೆ ನೈತಿ-ಕ ಮತದಾನ ಮಾಡಿ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬಲಪಡಿಸಲು ಸಹಕರಿಸಬೇಕು' ಎಂದು ತಿಳಿಸಿದರು.

ತಾಲೂಕು ಸ್ವೀಪ ಸಮಿತಿ ಅಧ್ಯಕ್ಷರಾದ, ತಾಪಂ ಇಓ ಸುಭಾಷ ಸಂಪಗಾಂವಿ ಅವರು ಮಾತನಾಡಿ, 'ಮತದಾರರು ಪ್ರಾಮಾಣಿಕ, ನ್ಯಾಯಸಮ್ಮತ, ನಿಷ್ಪಕ್ಷಪಾತವಾಗಿ ಮತದಾನ ಮಾಡಬೇಕು. ಇದು ಪ್ರತಿಯೊಬ್ಬ ನಾಗರಿಕನ ಕರ್ತವ್ಯವಾಗಿದೆ. ಪ್ರತಿಯೊಬ್ಬರೂ ತಪ್ಪದೇ ಮತದಾನ ಮಾಡಬೇಕು ಅಂದಾಗ ಮಾತ್ರ ಮತದಾನದಿಂದ ಸುಭದ್ರ ಪ್ರಜಾಪ್ರಭುತ್ವ ರಾಷ್ಟ್ರ ನಿರ್ಮಾಣವಾಗಲು ಸಾಧ್ಯ' ಎಂದು ಹೇಳಿದರು. ಸಹಾಯಕ ಚುನಾವಣಾಧಿಕಾರಿ, ತಹಸೀಲ್ದಾರ್ ರವೀಂದ್ರ ಹಾದಿಮನಿ, ಕ್ಷೇತ್ರ ಶಿಕ್ಷಣಾಧಿಕಾರಿ ಆರ್‌.ಬಳಿಗಾರ, ತಾಪಂ ಸಹಾಯಕ ನಿರ್ದೇಶಕರಾದ ಸುರೇಶ ನಾಗೋಜಿ ಹಾಗೂ ಲಿಂಗರಾಜ ಹಲಕರ್ಣಿಮಠ ಸೇರಿದಂತೆ ತಾಪಂ ಕಚೇರಿ ಸಿಬ್ಬಂದಿ, ಕಾರ್ಯದರ್ಶಿಗಳು ಪಾಲ್ಗೊಂಡಿದ್ದರು.

# ನಕಲಿ ಅಂಕಪಟ್ಟಿ ನೀಡಿ ಪ್ರಾಚಾರ್ಯ ಹುದ್ದೆಗೇರಿದ್ದ ಪ್ರಾಂಶುಪಾಲ ವಿರುದ್ಧ ದೂರು ದಾಖಲು

ಧಾರವಾಡ: ನಕಲಿ ಅಂಕಪಟ್ಟಿ ನೀಡಿ ಪ್ರಾಚಾರ್ಯ ಹುದ್ದೆಗೇ-ರಿದ್ದ ಪ್ರಾಂಶುಪಾಲನ ಮೇಲೆ ದೂರು ದಾಖಲಿಸಿದ ಘಟನೆ ಧಾರವಾಡದಲ್ಲಿ ನಡೆದಿದೆ.

ಧಾರವಾಡದ ಮುತ್ತಣ್ಣ ಸ್ಮಾರಕ ಪೊಲೀಸ್ ವಸತಿ ಶಾಲೆಯ ಡಾ.ಯಲ್ಲಪ್ಪಗೌಡ ಪಿ.ಕಲ್ಲನಗೌಡರ ಎಂಬವರು ನಕಲಿ ಬಿ.ಎಡ್ ಅಂಕಪಟ್ಟಿ ನೀಡಿ ಪ್ರಾಂಶುಪಾಲ ಹುದ್ದೆ ಗಿಟ್ಟಿಸಿಕೊಂಡಿದ್ದಾರೆ ಎಂಬ



ಆರೋಪ ಕೇಳಿ ಬಂದಿತ್ತು. ವಾರ್ಡನ್ ಹುದ್ದೆಯಲ್ಲಿದ್ದ ಡಾ.ಯಲ್ಲಪ್ಪಗೌಡ ಕಲ್ಲನಗೌಡರ ಉತ್ತರ ಪ್ರದೇಶದಲ್ಲಿ ನಕಲಿ ಬಿ.ಎಡ್ ಅಂಕಪಟ್ಟಿಯನ್ನು ಮಾಡಿಸಿದ್ದರು. 2001ರಲ್ಲೇ ಉತ್ತರ ಪ್ರದೇಶದ ಡಿಪಾರ್ಟ್ಮೆಂಟ್ ಆಫ್ ಓಪನ್ ಡಿಸ್ಟನ್ಸ್ ಎಜ್ಯುಕೇಶನ್ ಕೇಂದ್ರದ ಅಂಕಪಟ್ಟಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದರು.

2006ರ ವರೆಗೂ ವಾರ್ಡನ್ ಆಗಿದ್ದ ಕಲ್ಲನಗೌಡರ ನಕಲಿ ಅಂಕಪಟ್ಟಿಯನ್ನು ಧಾರವಾಡ ಜಿಲ್ಲಾ ಪೊಲೀಸ್ ಕಚೇರಿಗೆ ಸಲ್ಲಿಸಿ, ಅಲ್ಲಿಂದ ಪ್ರಾಂಶುಪಾಲ ಹುದ್ದೆಗೇ-ರಿದ್ದಾರೆ. ಉತ್ತರ ಪ್ರದೇಶ ರಾಜ್ಯದ ಅಂಕಪಟ್ಟಿಗೆ ಮಾನ್ಯತೆ ಇಲ್ಲದಿದ್ದರೂ ಅದನ್ನು ಕೊಟ್ಟು ಇಲಾಖೆಗೆ ಹಾಗೂ ಸರ್ಕಾರಕ್ಕೆ ಮೋಸ ಮಾಡಿದ್ದಾರೆ. 2007–08ರ ಸಾಲಿನಲ್ಲಿ ಕರ್ತವ್ಯದಲ್ಲಿದ್ದರೂ ಮತ್ತೊಮ್ಮೆ ರೆಗ್ಯುಲರ್ ಬಿ.ಎಡ್ ಪದವಿ ಪಡೆದ ಕಲ್ಲನಗೌಡರ, ಇದನ್ನೂ ಸಹ ಕಾನೂನು ಬಾಹಿರವಾಗಿಯೇ ಪಡೆದು ಕೊಂಡಿದ್ದಾರೆ ಎಂದು ಆರೋಪಿಸಲಾಗಿದೆ.

ಹುಬ್ಬಳ್ಳಿಯ ಅಲ್ ಮಿಜಾನ್ ಎಜ್ಯುಕೇಶನ್ ಅಸೋಸಿಯೇಶನ್ ಕಾಲೇಜಿನಲ್ಲಿ ಕಲ್ಲನಗೌಡರ ಕಾನೂನು ಬಾಹಿರವಾಗಿ ಬಿ.ಎಡ್ ಪದವಿ ಪಡೆದಿದ್ದಾರೆ. ಕರ್ತವ್ಯದಲ್ಲಿದ್ದುಕೊಂಡೇ ಸರ್ಕಾರಕ್ಕೆ ನಂಬಿಕೆ ದ್ರೋಹ ಮಾಡಿದ ಆರೋಪದಡಿ ಇದೀಗ ಕಲ್ಲನಗೌಡರ ಮೇಲೆ ಸಿದಪ್ಪ ಅಕ್ಕಿ ಎನ್ನುವವರು ದೂರು ದಾಖಲಿಸಿದ್ದಾರೆ. ಈ ಕುರಿತು ದೂರು ದಾಖಲಿಸಿಕೊಂಡಿರುವ ಧಾರವಾಡ ಉಪನಗರ ಪೊಲೀಸರು ತನಿಖೆ ನಡೆಸಿದ್ದಾರೆ.

# ಸರಕಾರಿ ಕಚೇರಿ ಪಕ್ಕದಲ್ಲೇ ಇದ್ದರು ಕ್ಯಾರೇ ಎನ್ನದ ಅಧಿಕಾರಿಗಳು

## ನಾಗರಿಕರಲ್ಲಿ ಭಯ ಹುಟ್ಟಿಸಿದ ಆಹಾರ ಸಂಗ್ರಹ ಸಗಟು ಮಳಿಗೆಗಳು

ಬೈಲಹೊಂಗಲ: ಆಹಾರ ಸಾಮಗ್ರಿ ದಾಸ್ತಾನಕ್ಕಾಗಿ ನಿರ್ಮಾಣಗೊಂಡ ಬ್ರಿಟಿಷರ ಕಾಲದಲ್ಲಿನ ಪಟ್ಟಣದ ಕರ್ನಾಟಕ ಆಹಾರ ನಿಗಮದ ಸಗಟು ಮಳಿಗೆಗಳು ತುಂಬಾ ಶಿಥಿಲಗೊಂಡಿದ್ದರಿಂದ ನಾಗರಿಕರು ಭಯಭೀತರಾಗಿದ್ದು ಭೂತದ ಸ್ಥಳವಾಗಿ ಪರಿಣಮಿಸಿವೆ.

ಬೈಲಹೊಂಗಲ ಪಟ್ಟಣದ ಮುರಗೋಡ ರಸ್ತೆಯಲ್ಲಿನ ಲೋಕೋಪಯೋಗಿ ಕಛೇರಿ ಪಕ್ಕದಲ್ಲಿರುವ ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮ ನಿಯಮಿತದ ಈ ಸಗಟು ಮಳಿಗೆಗಳು ಶೀಥಿಲಗೊಂಡ ಕಾರಣ ತೀರಾ ದುರಾವಸ್ಥೆಯಾಗಿದ್ದು ನಾಗರಿಕರು ತುಂಬಾ ಭಯ ಪಡುವಂತೆ ಪರಿವರ್ತನೆಯಾಗಿವೆ.

ಸರಕಾರದ ಆಹಾರ ನಿಗಮಕ್ಕೆ ಒಳಪಡುವ ಈ ಗೋದಾಮು ತುಂಬಾ ಅನಾದರಕ್ಕೊಳಗಾಗಿದ್ದರಿಂದ ಇಲ್ಲಿನ ಸೇವೆಯನ್ನು ಸ್ಥಗಿತಗೊಳಿಸಿ ಎಪಿಎಂಸಿ ಆವರಣದಲ್ಲಿನ ಹೊಸ ಗೋದಾಮುಗಳಿಗೆ ಸ್ಥಳಾಂತರವಾಗಿದ್ದ-ರಿಂದ ಅಂದಿನಿಂದ ಇಂದಿನವರೆಗೆ ಅಧಿಕಾರಿಗಳು ಈಕಡೆ ದೃಷ್ಟಿ ಹರಿಸದ ನಿಮಿತ್ಯ ಈ ಗೋದಾಮು ಕಟ್ಟಡದ ಪರಿಕರಗಳು ಎತ್ತೆತ್ತಲೋ ಬಿದ್ದಿದ್ದು ಸರಕಾರದ ಆಸ್ತಿಗಳು ಯಾವ ರೀತಿ ನಿರುಪಯುಕ್ತವಾಗುತ್ತಿವೆ ಎಂಬುದಕ್ಕೆ ಇದೊಂದು ತಾಜಾ ಉದಾಹರಣೆಯಾಗಿದೆ.

ನಿಷ್ಕ್ರೀಯಗೊಂಡ ಈ ಕಟ್ಟಡದ ಸುತ್ತಲೂ ತಹಶೀಲ್ದಾರ, ಉಪವಿಭಾಗಾಧಿಕಾರಿ, ಲೋಕೋಪಯೋಗಿ, ಡಿವಾಯಎಸ್‌ಪಿ, ನ್ಯಾಯಾಲಯ, ಅಟಲಜೀ ಜನಸ್ನೇಹಿ ಕೇಂದ್ರ, ಆಹಾರ ಪೂರೈಕೆ, ಕಂದಾಯ ನಿರೀಕ್ಷಕರ ಮುಂತಾದ ಮುಖ್ಯ ಸರಕಾರಿ ಕಚೇರಿಗಳು, ನೌಕರರ ಭವನವಿದ್ದು ನಿತ್ಯ ನೂರಾರು ಜನರು ತಮ್ಮ ಕೆಲಸ ಕಾರ್ಯಗಳಿಗೆ ಆಗಮಿಸುತ್ತಿದ್ದು ಈ ಗೋದಾಮಿನ ಅವಶೇಷಗಳನ್ನು ಕಂಡು



ಹೌಹಾರುತ್ತಿದ್ದಾರೆ.

ತಹಶೀಲ್ದಾರ, ಎಸಿ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಸಹ ನಿತ್ಯ ಈ ಸ್ಥಳದ ಮುಖಾಂತರವೇ ಹಾದು ಹೋಗುತ್ತಿದ್ದರೂ ಸಹ ಇದರ ಕಡೆಗೆ ಕಿಂ-ಚಿತ್ತು ಗಮನ ಹರಿಸದಿರುವದು ಆಡಳಿತದ ನಿರ್ಲಕ್ಷ್ಯಕ್ಕೆ ಹಿಡಿದ ಕನ್ನಡಿಯಾಗಿದೆ. ಈಗಾಗಲೇ ಹಲವು ಅಧಿಕಾರಿಗಳಿಗೆ ದುರಾವಸ್ಥೆ ಕಂಡ ಇವುಗಳ ಬಗ್ಗೆ ತಿಳಿಸಿದರೂ ಸಹ ಕ್ಯಾರೇ ಎಂದಿಲ್ಲ ಎಂದು ತಿಳಿದು ಬಂದಿದೆ.

ನಿಗಮದ ಗೋಡಾವನದ ಪಕ್ಕ ಮತ್ತೊಂದು ಇಲಾಖೆಯ ದಾಸ್ತಾನು ಕಟ್ಟಡವಿದ್ದು ಅದು ಸಹ ಇದೇ ಪರಿಸ್ಥಿತಿ ಅನುಭವಿಸುತ್ತಿದೆ. ಕಟ್ಟಡದ ಅಕ್ಕ ಪಕ್ಕ ಮದ್ಯವ್ಯಸನಿಗಳು ಸಾರಾಯಿ ಕುಡಿದು ಬಾಟಲಿಗಳನ್ನು ಒಡೆದು ಹಾಕುತ್ತಿರುವದರಿಂದ ನಾಗ-ರಿಕರು ಸಂಚಾರ ಮಾಡಲು ಹರ ಸಾಹಸ ಮಾಡಬೇಕಾಗಿದೆ. ಮುಂಬರುವ ದಿನಗಳಲ್ಲಿ ಮಳೆ ಗಾಳಿ ಬಿಸುವ ಸಂದರ್ಭದಲ್ಲಿಯೂ ಅಪಾಯ ಸಂಭವಿಸುವ ಸಾಧ್ಯತೆ ಇದ್ದು ಅದನ್ನು ತಪ್ಪಿಸಲು ಸಂಭದಪಟ್ಟ ಅಧಿಕಾ-ರಿಗಳು ಕೂಡಲೇ ಕಡೆ ಗಮನ ಹರಿಸಿ ಅವ್ಯವಸ್ಥೆಗೊಂಡ ಈ ಕಟ್ಟಡಗಳನ್ನು ಶೀಘ್ರವೇ ತೆರವುಗೊಳಿಸಿ ಜನರಲ್ಲಿನ ಆತಂಕವನ್ನು ನಿವಾರಿಸಿಬೇಕು. ಇಲ್ಲದೇ ಹೋದರೆ ಹಾಳು ಬಿದ್ದ ಗೋದಾಮಿನಲ್ಲಿ ಹುಳ-ಹುಪ್ಪಡಿಗಳು ಸೇರಿ ಮತ್ತಷ್ಟು ಭಯ ಬೀಳುವ ಸಂಭವ ಎದುರಾಗುವ ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲ. ಜನರ ಪಡಿಪಾಟಲು ತಪ್ಪಿದ್ದಲ್ಲ.

# ರಾಜ್ಯ ಹಿರಿಯ ಉಪಾಧ್ಯಕ್ಷರಾಗಿ ಬಸಲಿಂಗಯ್ಯ ನೇಮಕ



ಬೈಲಹೊಂಗಲ: ಕರ್ನಾಟಕ ರಾಜ್ಯ ಬೇಡ ಜಂಗಮ ಮಹಾಸಭಾದ ರಾಜ್ಯ ಘಟಕದ ಹಿರಿಯ ಉಪಾಧ್ಯಕ್ಷರಾಗಿ ತಾಲೂಕಿನ ಆನಿಗೋಳ ಗ್ರಾಮದ ವೇ. ಮೂ. ಬಸಲಿಂಗಯ್ಯ ಚಿಕ್ಕಮಠ ಅವರು ನೇಮಕಗೊಂಡಿದ್ದಾರೆ.

ಬಸಲಿಂಗಯ್ಯ ಅವರು ಈಗಾಗಲೇ ಬೇಡ ಜಂಗಮ ಸಂಘಟಣೆಯ ಜಿಲ್ಲಾಧ್ಯಕ್ಷರಾಗಿ ಹಲವು ಹೋರಾಟಗಳನ್ನು ಕೈಗೊಂಡು ಆ ಮೂಲಕ ಸಮಾಜದ ಕಾರ್ಯಗಳಲ್ಲಿ ಸಕ್ರೀಯವಾಗಿ ಪಾಲ್ಗೊಂಡು ಗು-ರಿತಿಸಿಕೊಂಡಿದ್ದಾರೆ. ಅವರ ಸೇವಾ ಮನೋಭಾವ ಮನಗಂಡು ಇದೀಗ ಇವರನ್ನು ರಾಜ್ಯ ಹಿರಿಯ ಉಪಾಧ್ಯಕ್ಷರನ್ನಾಗಿ ನೇಮಕ ಮಾಡಿ ರಾಜ್ಯಾಧ್ಯಕ್ಷ ಅರುಣಕುಮಾರ ಜಡಿಮಠ ಅವರು ಆದೇಶ ಹೊರಡಿಸಿದ್ದಾರೆ.

# ಸ್ವೀಪ್ ಸಮಿತಿ ವತಿಯಿಂದ ಮತದಾನ ಜಾಗೃತಿ ಬೈಕ ರ್‍ಯಾಲಿ



ಬೆಳಗಾವಿ: ಸವದತ್ತಿ ತಾಲೂಕೂ ಪಂಚಾಯತ ಆವರಣದಲ್ಲಿ ಗುರುವಾರ ತಾಲ್ಲೂಕು ಸ್ವೀಪ್ ಸಮಿತಿ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಬೈಕ ರ್‍ಯಾಲಿಗೆ ತಾಪಂ ಕಾರ್ಯನಿರ್ವಾಹಕ ಅಧಿಕಾರಿಗಳಾದ ಪ್ರವೀಣಕುಮಾರ ಸಾಲಿ ಚಾಲನೆ ನೀಡಿದರು.

ತಾಲೂಕ ಪಂಚಾಯತ ವತಿಯಿಂದ ಆಯೋಜಿಸಿದ್ದ ಮತದಾನ ಜಾಗೃತಿ ತಾಪಂ ಕಾರ್ಯಾಲಯದಿಂದ ಆರಂಭವಾದ ಬೈಕ್ ರ್‍ಯಾಲಿಯೂ ಸವದತ್ತಿ ಪಟ್ಟಣದ ಪ್ರಮುಖ ಬೀದಿಗಳಲ್ಲಿ, ಬಸ ನಿಲ್ದಾಣದಲ್ಲಿ ಸಂಚರಿಸಿ ಬೆಟಸೂರ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಸಂಚರಿಸಿ ಮತದಾರರಿಗೆ ಮತದಾನ ಜಾಗೃತಿ ಮೂಡಿಸಲಾಯಿತು.

ತಾ.ಪಂ ಯೋಜನಾಧಿಕಾರಿಗಳಾದ ಡಾ. ಮಾರುತಿ ಚೌಡಪ್ಪನವರ, ತಾಪಂ ಸಹಾಯಕ ನಿರ್ದೇಶಕರಾದ (ಗ್ರಾ.ಉ) ರಮೇಶ ರಕ್ಕಸಗಿ, ತಾಪಂ ಸಹಾಯಕ ನಿರ್ದೇಶಕರಾದ (ಪಂ.ರಾ) ಆರ್ ಎ ಪಾಟೀಲ, ತಾಪಂ ವ್ಯವಸ್ಥಾಪಕರಾದ ಜಿ ಎಸ್ ಬಡೆಮ್ಮಿ, ಐಇಸಿ ಸಂಂ-ಯೋಜಕರಾದ ಮಲೀಕಜಾನ ಮೋಮಿನ, ತಾಂತ್ರಿಕ ಸಂಯೋಜಕರಾದ ಮಹಾದೇವ ಕಾಮನ್ನವರ ಎಂಐ-ಎಸ್ ಸಂಯೋಜಕ ನಾಗರಾಜ ಬೆಹರೆ, ಅಭಿವೃದ್ಧಿ ಅಧಿಕಾರಿಗಳು, ತಾಂತ್ರಿಕ ಸಹಾಯಕರು, ವ್ ಆರ್ ಡಬ್ಲ್ಯು , ವಿಆರ್ ಡಬ್ಲ್ಯೂ, ಕಾಯಕ ಮಿತ್ರರು, ಬಿಎಫ್‌ಟಿಗಳು, ಬಿಎಲ್‌ಓಗಳು, ಸುಪರ ವೈಸರ್, ಸಿಬ್ಬಂದಿಗಳು ಇನ್ನಿತರರು ಉಪಸ್ಥಿತರಿದ್ದರು.

# ಚಂದನಹೊಸೂರ ಶ್ರೀ ಕಲ್ಮೇಶ್ವರ ಜಾತ್ರಾ ಮಹೋತ್ಸವ

ಬೆಳಗಾವಿ: ತಾಲೂಕಿನ ಚಂದನಹೊಸೂರ ಗ್ರಾಮದ ಶ್ರೀ ಕಲ್ಮೇಶ್ವರ ಜಾತ್ರಾ ಮಹೋತ್ಸವವು ರವಿವಾರ 02–04–2023 ರಿಂದ ಗುರುವಾರ ದಿ. 06–04–2023 ರವರೆಗೆ ಐದು ದಿನಗಳ ಕಾಲ ಸಂಭ್ರಮದಿಂದ ಜಾತ್ರಾ ಮಹೋತ್ಸವ ಜರುಗುವುದು.

ರವಿವಾರ ದಿ. 02 ರಂದು ಗ್ರಾಮಸ್ಥರಿಂದ ಅಂಬಲಿ ಬಂಡೆಯನ್ನು ಸಿದ್ದಪಡಿಸಿ ಕಿಚ್ಚದ ಕಟ್ಟಿಗೆಯನ್ನು ತಂದು ಪೂಜೆ ಸಲ್ಲಿಸುವರು. ಸೋಮವಾರ ದಿ. 03 ರಂದು ಬೆಳಿಗ್ಗೆ ಶ್ರೀ ಕಲ್ಮೇಶ್ವರ ದೇವರಿಗೆ ಮಹಾರುದ್ರಾಭೀಷೇಕ ನಂತರ ಸಾಯಂಕಾಲ 5 ಗಂಟೆಗೆ ಭಕ್ತಾದಿಗಳಿಂದ ಅಂಬಲಿ ಬಂಡೆಗಳು ಶ್ರೀ ಕಲ್ಮೇಶ್ವರ ಗುಡಿ ಪ್ರದಕ್ಷಣೆ ಹಾಕಿ ಭಕ್ತಾದಿಗಳಿಗೆ ಗುಗ್ಗರಿ ಹಾಗೂ ಅಂಬಲಿ ಮಹಾಪ್ರಸಾದ ಮಾಡಲಾಗುವುದು. ನಂತರ ರಾತ್ರಿ 10 ಗಂಟೆ ನಂತರ ಗೀಗಿ ಪದಗಳು(ಶಾವರಕಿ ಪದಗಳು) ನಡೆಯುವುವು.

ಮಂಗಳವಾರ ದಿ. 04 ರಂದು ಗ್ರಾಮದ ಭಕ್ತಾಧಿಗಳು ಚಕ್ಕಡಿ, ಟ್ರಾಕ್ಟರ, ಟೆಂಪೂ ಹಾಗೂ ಇನ್ನೀತರ ವಾಹನಗಳಿಂದ ಕಿಚ್ಚದ ಕಟ್ಟಿಗಳನ್ನು ತಂದು ಕಿಚ್ಚವನ್ನು ತಯಾರಿಸಿ ಸಂಜೆ 6 ಗಂಟೆಗೆ ಕಿಚ್ಚ ಹಾಯುವುದು. ನಂತರ ರಾತ್ರಿ 10 ಗಂಟೆಗೆ ಶ್ರೀ ಕೃಷ್ಣ ಪಾರಿಜಾತ ನಡೆಯುವುದು.ಬುಧವಾರ ದಿ. 05 ರಂದು ಹರಕೆ ಹೊತ್ತ ಭಕ್ತಾದಿಗಳು ದೇವ-ರಿಗೆ ತೋಕಾನುತೂಕ ಕಾಯಿಗಳನ್ನು ಅರ್ಪಿಸುವ ಕಾರ್ಯಕ್ರಮ ನಡೆಯಲಿದೆ. ನಂತರ ರಾತ್ರಿ 10 ಗಂಟೆಗೆ ರಸಮಂಜರಿ ಕಾರ್ಯಕ್ರಮ ನಡೆಯಲಿದೆ.

ಗುರುವಾರ ದಿ. 06 ರಂದು ಕಲ್ಮೇಶ್ವರ ಪಾಲಕಿ ಸೇವೆಯೊಂದಿಗೆ ಜಾತ್ರೆಯು ಮುಕ್ತಾಯವಾಗುವುದು. ರಾತ್ರಿ 10 ಗಂಟೆಗೆ ಸಂಗ್ಯಾ ಬಾಳ್ಯಾ ನಾಟಕ ಜರುಗುವುದು ಎಂದು ಜಾತ್ರಾ ಕಮೀಟಿಯ ಪಂಚರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

BELAGAVI VARADI KANNADA DAILY MORNING : Editor, Printer, Publisher & Owned By : **Satish Basavani Gudagenatti,** Basavani House No.53, Ashray Colony, Sarathi Nagar, Tv Center - 590019, TQ & DIST Belagavi, Karnataka.
Printed At : LAXMI PRINTERS, No.627. Auto Nagar - 590016.TQ & DIST Belagavi, Karnataka Mob : 9900332089